10.20 A.M

ಕರ್ನಾಟಕ ವಿಧಾನಸಭೆ

ಸೋಮವಾರ 19ನೇ ಜೂನ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ಬಿಎಂಐಸಿ ಬಗ್ಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೊಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್: ಅಧ್ಯಕ್ಷರೇ, ಆ ಭಾಗದಲ್ಲಿ ಜೆ.ಡಿ.ಎಸ್. ಸದಸ್ಯರು ಯಾರೂ ಇಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮುಖ್ಯಮಂತ್ರಿಗಳ ಜಾಗದಲ್ಲಿ ಯಾರೂ ಇಲ್ಲ, ಇಪ್ಪತ್ತು ತಿಂಗಳ ಕಾಲ ನೀವೇ ಕುಳಿತುಕೊಳ್ಳಿ. ಆ ಜಾಗದಲ್ಲಿ ಯಾರೂ ಇಲ್ಲವಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು): ಸರ್ಕಾರದ ಪರವಾಗಿ ಉಪ ಮುಖ್ಯಮಂತ್ರಿಯಾಗಿ ನಾನಿದ್ದೇನೆ. ಸಚಿವರು ಇದ್ದಾರೆ, ನಮ್ಮ ಜೆ.ಡಿ.ಎಸ್. ಸ್ನೇಹಿತರು ಇದ್ದಾರೆ. ಎಲ್ಲರೂ ಇದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ನಿಮ್ಮ ಹಿಂದಿನ ಅನುಭವದ ತರಹ ಏನೂ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಆದರೆ, ಗೌರವದಿಂದ ಬಾಳಿರಿ. ನಾನು ಇಷ್ಟೇ ಹೇಳುತ್ತೇನೆ, ಮತ್ತೆ ಏನನ್ನೂ ಹೇಳುವುದಿಲ್ಲ. ನೀವು ಉಳಿಯಿರಿ, ಸರ್ಕಾರವನ್ನು ಮಾಡಿ, ನಾವು ನಿಮ್ಮನ್ನು ರಾಜಿನಾಮೆ ಕೇಳಿಲ್ಲ. ಆದರೆ, ಗೌರವದಿಂದ ಬಾಳಲಿಕ್ಕೆ ಪ್ರಯತ್ನ ಮಾಡಿ, ನಾವು ಅಷ್ಟೇ ಹೇಳುವುದು.

ಶ್ರೀ ಕೆ.ಎಸ್. ಈಶ್ವರಪ್ಪ: ಗೌರವಕ್ಕೂ, ಕಾಂಗ್ರೆಸ್ಸಿಗೂ ಈ ದೇಶದಲ್ಲಿ ಸಂಬಂಧವೇ ಇಲ್ಲ. ನೀವೇಕೆ ಆ ಪದ ಹೇಳುತ್ತೀರಿ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೇ, ನೈಸ್ ಕಂಪನಿ ಬಗ್ಗೆ ನಾನು ನಿಲುವಳಿ ಸೂಚನೆ ಕೊಟ್ಟಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ನಾವೂ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು; ಮೊದಲು ಈ ಕಾಗದ ಪತ್ರಗಳು ಸದನದಲ್ಲಿ ಮಂಡನೆಯಾಗಲಿ. ಅನಂತರ ತೆಗೆದುಕೊಳ್ಳೋಣ.

ಶ್ರೀ ಎನ್. ಧರ್ಮಸಿಂಗ್: ಇಲ್ಲ, ಅದಕ್ಕಿಂತ ಮುಂಚೆಯೇ ಇದನ್ನು ತೆಗೆದುಕೊಳ್ಳಬೇಕು. ಈಗ ಸದನದ ಕಾರ್ಯ ಕಲಾಪಗಳನ್ನು ಬದಿಗಿಟ್ಟು, ಈ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು. ಇವತ್ತು ನಾವು ಅತ್ಯಂತ ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ನಡೆಯತಕ್ಕಂಥ ಘಟನೆಗಳೇನಿವೆ, ಮುಖ್ಯಮಂತ್ರಿಗಳ ಹೇಳಿಕೆ ಏನಿದೆ, ಆ ಹಿನ್ನೆಲೆಯಲ್ಲಿ ನಾವು ಹೇಳಿದ್ದೇವೆ. ಅದಕ್ಕೆ, ತಾವು ಅವಕಾಶ ಕಲ್ಪಿಸಿ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೇ, ನಾವು ಕೂಡ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಬಹಳ ಗಂಭೀರವಾದಂಥ ವಿಚಾರ. ಇವತ್ತು ಸರ್ಕಾರ ನೈಸ್ ಕಂಪನಿ ಮತ್ತು ಬಿಎಂಐಸಿ ಬಗ್ಗೆ ವಿಭಿನ್ನವಾದಂಥ ದಾರಿಯಲ್ಲಿ ಹೋಗುತ್ತಾ ಇದೆ. ಅದನ್ನು ಗಂಭೀರವಾಗಿ ಚರ್ಚೆ ಮಾಡಬೇಕು.

ಅಧ್ಯಕ್ಷರು: ಸಭೆಯು ಮುಂದೆ ಮಂಡಿಸುವ ಕೆಲವು ಕಾಗದ ಪತ್ರಗಳು ಇವೆ, ಅವುಗಳನ್ನು ಮೊದಲು ಮಂಡಿಸಲಿ.

ಶ್ರೀ ಎನ್. ಧರ್ಮಸಿಂಗ್: ಆಮೇಲೆ ಮಾಡಬಹುದು. ಈ ನಿಲುವಳಿ ಸೂಚನೆ ಅತ್ಯಂತ ಗಂಭೀರವಾದುದು ಇದೆ.

ಅಧ್ಯಕ್ಷರು: ಆಯಿತು, ತಾವು ಮಾತನಾಡಿ. ಶ್ರೀ. ಶ್ರೀರಾಮರೆಡ್ಡಿಯವರು ಕಳುಹಿಸಿರುವ ಸೂಚನೆಯೂ ಹೆಚ್ಚು ಕಡಿಮೆ ಒಂದೇ ಇದೆ. ಅದೂ ಕೂಡ ಬಿ.ಎಂ.ಐ.ಸಿ. ಬಗ್ಗೆ ಇದೆ. ನಿಮಗೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಮೊದಲು ಯಾರು ಕೊಟ್ಟಿದ್ದಾರೆಂಬುದನ್ನು ತಾವು ನೋಡಬೇಕಾಗುತ್ತದೆ. ಶ್ರೀರಾಮರೆಡ್ಡಿಯವರು ಮೊದಲು ಕೊಟ್ಟಿದ್ದಾರೋ ಅಥವಾ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೋ ಎಂಬುದನ್ನು ತಾವು ನೋಡಬೇಕು.

ಶ್ರೀ ಎನ್. ಧರ್ಮಸಿಂಗ್: ನಾವು ನಿನ್ನೆ ಮುಂಜಾನೆ 8–45ಕ್ಕೆ ಕೊಟ್ಟಿದ್ದೇವೆ. ಸಭಾಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ ಈ ಸಮ್ಮಿಶ್ರ ಸರ್ಕಾರದ ನಡವಳಿಕೆ ಏನಿದೆ, ಯಾವ ಕಾಲದಲ್ಲೂ ಸಹ ಈ ರೀತಿಯಾತಿ ನಡೆದುಕೊಂಡಿದ್ದನ್ನು ನಾವು ನೋಡಿಲ್ಲ. ನಾವು ಕೂಡ 1978 ರಿಂದ ಈ ಸದನದಲ್ಲಿ ಇದ್ದೇವೆ. ಅನೇಕ ಮುಖ್ಯಮಂತ್ರಿಗಳನ್ನು ನೋಡಿದ್ದೇವೆ. ಆದರೆ ಇವತ್ತು ಈ ರೀತಿಯಾದ ನಡವಳಿಕೆ ಏನಿದೆ, ಇದನ್ನು ಎಲ್ಲಿಯೂ ನೋಡಿಲ್ಲ. ನಾನು ಬಿ.ಎಂ.ಐ.ಸಿ. ಪ್ರಾಜೆಕ್ಟ್ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಿಂತಿಲ್ಲ. ಆ ವಿಚಾರವನ್ನು ನಾವು ಪ್ರತ್ಯೇಕವಾಗಿ ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ. ವಿವರವಾದ ಚರ್ಚೆಯಲ್ಲಿ ಕೂಡ ಭಾಗವಹಿಸುತ್ತೇವೆ. ಆದರೆ, ಹದಿಮೂರನೇ ತಾರೀಖು ಈ ರಾಜ್ಯದ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಕುಮಾರಸ್ವಾಮಿಯವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ರೀತಿಯಾದ ಹೇಳಿಕೆ ಕೊಡತಕ್ಕಂಥಾದ್ದು ಮೊಟ್ಟ ಮೊದಲನೆಯದಾಗಿ ಅಲ್ಲ. ಪ್ರತ್ಯೇಕ ಬೇರೆ ಬೇರೆ

ಸಮಯದಲ್ಲಿ ಅವರು ಹೇಳುತ್ತಾರೆ. ಅವರು ಯಾರು ಯಾರು ಇದ್ದಾರೆ, ಸಮಯ ಬಂದಾಗ ಹೇಳುತ್ತೇನೆ. ನನ್ನ ಬಳಿ ಎಲ್ಲಾ ರಿಪೋರ್ಟ್ ಇದೆ ಎಂದು ಹೇಳುತ್ತಾರೆ. ಉಪ ಮುಖ್ಯ ಮಂತ್ರಿಗಳೂ ಹೇಳುತ್ತಾರೆ. ಅದರ ಬಗ್ಗೆ ನಮಗೆ ಬೇಕಿಲ್ಲ. ಈ ಬಿ.ಎಂ.ಐ.ಸಿ. ವಿಚಾರವಾಗಿ ಬಹಳಷ್ಟು ವಿಚಾರಗಳು ಪತ್ರಿಕೆಯಲ್ಲಿ ಬಂದಾಗ, ಅವರು ಏನು ಹೇಳಿದ್ದಾರೆ, ಒಬ್ಬ ಪತ್ರಕರ್ತ ಮತ್ತು ಒಬ್ಬ ಧರ್ಮಸಿಂಗ್‌ರವರ ಮಂತ್ರಿಮಂಡಲದಲ್ಲಿದ್ದಂಥ ಮಾಜಿ ಮಂತ್ರಿಗಳು "They tried to buy me, they can by others, but not me ನನ್ನನ್ನು, ಸಂಪರ್ಕಿಸಲು ಯತ್ನಿಸಿದರು ಎಂದು ಹೇಳಿದ್ದಾರೆ. ನನ್ನ ಸರ್ಕಾರ ಮಾರಾಟಕ್ಕಿಲ್ಲ ಎಂದು ಹೇಳಿದ್ದಾರೆ. ನಾವೆಲ್ಲ ಮಾರಾಟಕ್ಕೆ ಇಟ್ಟಿದ್ದಾರೆಂದು ಹೇಳಿದ್ದು ಇವತ್ತು ಜನರಲ್ಲೇ ಆ ಭಾವನೆ ಬಂದಿದೆ. ಈ ಸಮ್ಮಿಶ್ರ ಸರ್ಕಾರ ಬೀದಿಗೆ ಇಳಿದಿದೆ ಎಂಬುದೂ ಕೂಡ ಜನರ ಮುಂದೆ ಬಂದಿದೆ. ನೈಸ್ ಕಂಪನಿ ಪರವಾಗಿ ಒಬ್ಬ ಮಾಜಿ ಮಂತ್ರಿ, ಒಬ್ಬ ಪತ್ರಕರ್ತರು ನನ್ನನ್ನು ಸಂಪರ್ಕಿಸಿ ಲಂಚದ ಆಮಿಷ ಒಡ್ಡಿದರು, ಇವರುಗಳ ಹೆಸರುಗಳನ್ನು ಮಾತ್ರ ಬಹಿರಂಗಗೊಳಿಸಲು ಮುಖ್ಯಮಂತ್ರಿಗಳು ಮುಂದಾಗಲಿಲ್ಲ. ಇದೊಂದು ಅತ್ಯಂತ ಗಂಭೀರವಾದಂಥ ಪ್ರಶ್ನೆ. ಇವತ್ತು ರಾಜ್ಯದ ಜನತೆ ನೋಡುತ್ತಾರೆ. ಒಬ್ಬ ಮುಖ್ಯಮಂತ್ರಿ ಬೇಜವಾಬ್ದಾರಿಯಿಂದ ಈ ರೀತಿ ಹೇಳಿದ್ದಾರೋ, ತಿಳಿದು ಹೇಳಿದ್ದಾರೋ, ತಿಳಿಲಾರದೇ ಹೇಳಿದ್ದಾರೋ ಅಂತ. ಆದರೆ, ಒಂದು ಗಂಭೀರವಾದಂಥ ಆಪಾದನೆ ಮಾಡಿದ್ದಾರೆ. ಈ ರೀತಿ ಗಂಭೀರವಾದಂಥ ಆಪಾದನೆಯನ್ನು ರಾಜ್ಯದ ಮುಖ್ಯಮಂತ್ರಿಗಳು ಮಾಡಿದ ಮೇಲೆ ಇವತ್ತು ಅವರುಗಳ ಹೆಸರುಗಳನ್ನು ಹೇಳಲಿ. ಏನೆಂದರೆ, "ನಾನು ಅದಕ್ಕೆ ಒಳಗಾದವನಲ್ಲ, ನಾನು ಆ ತರಹದ ಅಭಿರುಚಿಗೆ ಬಲಿ ಬೀಳತಕ್ಕವನಲ್ಲ, ಈ ಸರ್ಕಾರ ಮಾರಾಟಕ್ಕಿಲ್ಲ" ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಮುಖ್ಯಮಂತ್ರಿಗಳು ಸರ್ಕಾರವನ್ನು ಮಾರಾಟಕ್ಕೆ ಇಟ್ಟಿದ್ದಾರೆಂದು ನಾವೆಲ್ಲಿಯೂ ಹೇಳಿಲ್ಲ. ಸುಮ್ಮನೆ ನೋಡುತ್ತಾ ಕುಳಿತಿದ್ದೇವೆ. 1958ರಿಂದ ಅಂದರೆ ಶ್ರೀ ಕೆ.ಸಿ. ರೆಡ್ಡಿಯವರ ಕಾಲದಿಂದ ಮೊನ್ನೆಯವರೆಗೆ, ನನ್ನ ಮಂತ್ರಿಮಂಡಲದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಎಂ.ಪಿ. ಪ್ರಕಾಶ್‌ರವರು ಇದ್ದರು ಅಲ್ಲಿಯವರೆಗೆ ಸರ್ಕಾರದ ವೈಖರಿಯನ್ನು ನೋಡಿದ್ದೇವೆ. ಯಾವಾಗಲೂ ಕೂಡ ಸಂಪುಟದ ಸಭೆ ನಡೆದಾಗ ಕೆಲವೊಂದು ವ್ಯತ್ಯಾಸಗಳು ಇರುತ್ತದೆ ; ಗುದ್ದಾಟ ಆಗುತ್ತದೆ. ಅಂತಿಮವಾಗಿ, ಸಂಪುಟದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆದರೆ, ರಾಜ್ಯದ ಇತಿಹಾಸದಲ್ಲಿ ಸಂಪುಟದ ಸಭೆ ಸೇರಿ, ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅವರು ನೈಸ್ ಕಂಪನಿ ಬಗ್ಗೆ ವಿಧೇಯಕ ಮಂಡಿಸುವ ವಿಷಯಕ್ಕೆ ಅನಂತರ ಬರುತ್ತೇನೆ. ಹೊರಗಡೆ ಮಾನ್ಯ ಯಡಿಯೂರಪ್ಪನವರ ಅಧ್ಯಕ್ಷತೆಯಲ್ಲಿ ಅವರ ಛೇಂಬರ್‌ಗೆ ಹೋಗುತ್ತಾರೆ. ಮಾನ್ಯ ಕುಮಾರಸ್ವಾಮಿ ನೇತೃತ್ವದಲ್ಲಿ ಅವರ ಛೇಂಬರ್‌ಗೆ ಹೋಗುತ್ತಾರೆ. ಈ

10.30 A.M

ತರಹದ ಘಟನೆಯನ್ನು ನಾವು ನಮ್ಮ ಜೀವನದಲ್ಲಿ ನೋಡಿಲ್ಲ. Because they have created ಇವತ್ತು ರಾಜ್ಯದಲ್ಲಿ ಆಡಳಿತವನ್ನು ವಹಿಸಿಕೊಂಡು ಜವಾಬ್ದಾರಿಯುತವಾಗಿ ಮಾನ್ಯ ಕುಮಾರಸ್ವಾಮಿಯವರು ಏನು ಕೆಲಸ ಮಾಡಬೇಕಾಗಿದೆ, ಅದನ್ನು ಮಾಡದೇ ಅವರು ಬಹಳಷ್ಟು ವಿಫಲರಾಗಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಅವರು ಹತಾಶರಾಗಿ, ಪ್ರಿಸ್ಟೀಜ್‌ಗೆ ಈಲ್ಡ್ ಆಗಿದ್ದಾರೆ. ಒಬ್ಬ ಮುಖ್ಯಮಂತ್ರಿಗಳ ಹೇಳಿಕೆ ನನಗೆ ಗೊತ್ತಿದೆ. ಪ್ರಾಜೆಕ್ಟ್ ತರುತ್ತೇನೆಂದು ಹೇಳುತ್ತಾರೆ. ಪ್ರಾಜೆಕ್ಟ್ ತರುವುದಿಲ್ಲವೆಂದು ಹೇಳುತ್ತಾರೆ. ತಮ್ಮ ಹತ್ತಿರ ಬಿಜಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಆಯಿತು "ಆಫೀಸ್ ಆಫ್ ಪ್ರಾಫಿಟ್ ಮಸೂದೆ ತರಬೇಕು ಅಂದಾಗ, ಬೇಡ್ರಿ, ಅದನ್ನು ಸ್ವಲ್ಪ ನೋಡ್ರಿ" ಅಂತ ಹೇಳಿದ್ದೇವೆ. ಇಲ್ಲಾ ಬಿ.ಎಂ.ಐ.ಸಿ. ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು, ದುಬೈಗೆ ಹೋಗತಕ್ಕಂಥ ಕಾಲದಲ್ಲಿ ಏನೇ ಬರಲಿ, ಸುಪ್ರೀಂ ಕೋರ್ಟ್ ಏನೇ ತೀರ್ಪು ಕೊಡಲಿ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಅಂದರೆ, ಈ ರಾಜ್ಯದಲ್ಲಿ ಇಂತಹ ಘಟನೆ ನಡೆದಿದ್ದು ಅಷ್ಟೆ ಅಲ್ಲ ಮತ್ತೊಬ್ಬರು ಮೇಧಾವಿ, ಈ ರಾಜ್ಯದ ನಾಯಕರು ಅವರು ಏನು ಹೇಳಿದ್ದಾರೆ, ಬಿ.ಎಂ.ಐ.ಸಿ.ಯವರು ನೈಸ್ ಕಂಪನಿಯವರು ಬಿಜೆಪಿ ಮಂತ್ರಿಗಳನ್ನು ಅವರ ಬುಟ್ಟಿಗೆ ಹಾಕಿಕೊಂಡಿದ್ದಾರೆಂದು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ. ಇದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇವೆಲ್ಲಾ ಏನು ಒಂದು ಸಂಗತಿಗಳು ಇವೆ, ಆ ಬಗ್ಗೆ ಒಂದು ಗಂಭೀರವಾದಂಥ ಆರೋಪವನ್ನು ನಾವು ಇವತ್ತು ಮಾಡುತ್ತಿದ್ದೇವೆ. ನಮ್ಮ ಪಕ್ಷದ ಪರವಾಗಿ, ಇವತ್ತು ವಿರೋಧ ಪಕ್ಷದ ಜಾಗದಲ್ಲಿ ಕುಳಿತು, ಈ ತರಹದ ವಿಚಾರಗಳು ಬಂದಾಗ ಅವುಗಳನ್ನು ಪ್ರಸ್ತಾಪಿಸುವುದು ನಮ್ಮ ಕರ್ತವ್ಯವಾಗುತ್ತದೆ. ಆ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ. ಈ ರಾಜ್ಯದ ಜನತೆಗೆ ಒಂದು ಸ್ಪಷ್ಟವಾದ ಉತ್ತರ, ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಅದಕ್ಕೆ ನಾವು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ನನ್ನ ಎದುರುಗಡೆ ಇದೆ. ಉಳಿದ ನಮ್ಮ ಕಾಂಗ್ರೆಸ್ ಪಕ್ಷದ ನಾಯಕರು ಎಲ್ಲರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅದಕ್ಕೆ ತಾವು ದೀರ್ಘವಾದಂತಹ ಚರ್ಚೆಯಾಗತಕ್ಕಂಥ ರೀತಿಯಲ್ಲಿ ಈ ನಿಲುವಳಿ ಸೂಚನೆಗೆ ಅನುಮತಿ ನೀಡಬೇಕೆಂದು ನಾವು ತಮಗೆ ವಿನಂತಿ ಮಾಡುತ್ತಿದ್ದೇವೆ. ತಾವು ಬೆಲ್ ಹಾಕಬೇಡಿ. ಅವರು ತರಾತುರಿಯಲ್ಲಿದ್ದರೆ ನೀವೇಕೆ ತರಾತುರಿಯಲ್ಲಿದ್ದೀರಿ? ನೀವು ಸ್ಪೀಕರ್ ಆಗಿ ಸದನದಲ್ಲಿ ಇಂತಹ ಗಂಭೀರವಾದಂಥ ವಿಚಾರಗಳಿಗೆ ಅನುವು ಮಾಡಿಕೊಡಬೇಕು. ಮತ್ತು ರಾಜ್ಯದ ಜನತೆಗೆ ನಿಮ್ಮ ಅಧ್ಯಕ್ಷತೆಯಲ್ಲಿ ಒಳ್ಳೆಯ ಒಂದು ಸಂದೇಶ ಕೊಡತಕ್ಕಂಥ ರೀತಿಯಲ್ಲಿ ತಾವು ಮುಂದಾಗಬೇಕಾಗುತ್ತದೆ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ, ಈ ನಿಲುವಳಿ ಸೂಚನೆಯನ್ನು ನಾವು ಮಂಡಿಸಿರುವುದು ನೇರವಾಗಿ ಸಂಬಂಧಪಟ್ಟಂತಹ ವಿಷಯವಾಗಿರುವುದರಿಂದ ಮತ್ತು ಅವರು ನೇರವಾಗಿ ಏನು ಮಾತನಾಡಿದ್ದಾರೋ ಮತ್ತು ಏನು ಹೇಳಿಕೆಯನ್ನು ಕೊಟ್ಟಿದ್ದಾರೋ, ಆ ಹೇಳಿಕೆ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುವಾಗ ಅವರ ಉಪಸ್ಥಿತಿ ಬಹಳ ಅವಶ್ಯ. ಇಲ್ಲಾ ಅಂದರೆ ಅವರು ಗೈರು ಹಾಜರಿಯಲ್ಲಿ ನಾವು ಮಾತನಾಡುವುದು, ನಂತರ ಅವರು ನಾವು ಇಲ್ಲದೇ ಇದ್ದಾಗ ಹೇಳಿಕೆಗಳನ್ನು ಕೊಟ್ಟು ಗೊಂದಲವನ್ನು ಸೃಷ್ಟಿ ಮಾಡುವುದು ಅಷ್ಟೇ ಅಲ್ಲದೇ ಕೆಲವು ಸಲ ಬ್ಲಾಕ್‌ಮೇಲ್ ಪದ್ಧತಿಯನ್ನು ಅವರು ಅನುಸರಿಸುತ್ತಿದ್ದಾರೆ. ಥ್ರೆಟನ್ ಮಾಡುವುದು, 50 ವರ್ಷದಿಂದ ಯಾರ್ಯಾರು ಏನೇನು ಮಾಡಿದ್ದಾರೆ, ನಾನು ನೋಡುತ್ತೇನೆಂದು ಹೇಳುವುದು, ಅವರದ್ದೆಲ್ಲಾ ಜಾಲಾಡುತ್ತೇನೆ ಎಂದು ಹೇಳುವುದು. ಈ ರೀತಿ ಹೆದರಿಸಿ ನೀವು ರಾಜಕೀಯ ಮಾಡುವುದಕ್ಕೆ ಆಗುತ್ತದೆಯೇ? ನಾವು ಎದುರಿಕೊಂಡು ಇಲ್ಲಿ ಬಾಯಿ ಮುಚ್ಚಿಕೊಂಡು ಕೂರುವುದಕ್ಕೆ ಬಂದಿದ್ದೇವೆಯೇ? ನಿಮ್ಮಲ್ಲಿ ಪುರಾವೆಗಳು ಇದ್ದರೆ, ಶಕ್ತಿ ಇದ್ದರೆ ಮಾಡಿ. ನೋಡೋಣ. ಆದರೆ ಕಾಲು ಕೆರೆದು ಜಗಳ ತೆಗೆಯುವುದು ಬೇಡ. ನಿಮ್ಮಲ್ಲಿ ದಾಖಲೆಗಳು ಇದ್ದು ಇಂತಿಂತಹವರು ಹೀಗೆ ಮಾಡಿದ್ದಾರೆ ಎನ್ನತಕ್ಕಂಥಾದ್ದು ಇದ್ದರೆ ನೀವು ಹೇಳಿ, ಅದಕ್ಕೆ ಪ್ರಾಪರ್ ಫೋರಂನಲ್ಲಿ ಸರಿಯಾದ ಉತ್ತರ ಕೊಡುತ್ತೇವೆ. ಆದರೆ ಮನಸ್ಸಿಗೆ ಬಂದಂತೆ ಹೇಳುವುದು ಸರಿಯಲ್ಲ. ಈಗ ಏನಾಗಿದೆ ನಿಮ್ಮ ಹೇಳಿಕೆಯಲ್ಲಿ ತಾವು ಏನು ಹೇಳಿದಿರಿ.

> "Following his return from Middle East on Monday, Mr. Kumaraswamy said, ' a Journalist met me and tried to talk me into a deal by offering me a bribe. I don't want to disclose anything more than this now. Elaborating, he even claimed that the NICE officials tried to influence him through a former minister when Mr. Dharam Singh Government was in power. This Government is not for sale."

ಸೇಲ್‌ಗೆ ಇದೆ ಅಂತ ಯಾರು ಹೇಳಿದರು? ಒಂದು ವೇಳೆ ನಿಮಗೆ ಬ್ರೈಬ್ ಕೊಡುವುದಕ್ಕೆ ಒಬ್ಬ ಮಾಜಿ ಮಂತ್ರಿ, ಒಬ್ಬ ಜರ್ನಲಿಸ್ಟ್ ಬಂದಿದ್ದರೆ, ನೀವು ಏನು ಕ್ರಮವನ್ನು ಅವರ ಮೇಲೆ ಜರುಗಿಸಿದ್ದಿರಿ? ಅವರು ಯಾರು? ಆ ಮಿನಿಸ್ಟರ್ ಯಾರು? ಆ ಜರ್ನಲಿಸ್ಟ್ ಯಾರು? ಅವರು ಹೇಗೆ ನಿಮಗೆ access ಆದರು? ಯಾರಾದರೂ ನಿಮ್ಮ ಬಳಿ ಬರಬೇಕಾದರೆ ಸಲಿಗೆ ಇಲ್ಲದಿದ್ದರೆ ಬರುವುದಕ್ಕೆ ಆಗುತ್ತದೆಯೇ? ಅಥವಾ ನಿಮ್ಮ ಹಿಂದಿನ ಟ್ರ್ಯಾಕ್ ರಿಕಾರ್ಡ್ ಸರಿ ಇದ್ದಿದ್ದರೆ

† ಮಾನ್ಯ ಸದಸ್ಯರಿಂದ ಪರಿಷ್ಕೃತಗೊಂಡಿದೆ.

ಬಹುಶಃ ನಿಮಗೆ ಕೇಳತಕ್ಕಂಥ ಧೈರ್ಯ ಅವರಿಗೆ ಆಗುತ್ತಿರಲಿಲ್ಲ. ಅದಕ್ಕೆ ನಿಮ್ಮನ್ನು ಕೇಳಿದವರಿಗೆ ಧೈರ್ಯ ಹೇಗೆ ಬಂತು? ಕೇಳಿದ ಮೇಲೆ ನೀವು ಅವರನ್ನು ಹೇಗೆ ಬಿಟ್ಟಿರಿ ಅವರ ಮೇಲೆ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ? ಮಾನ್ಯ ಅಧ್ಯಕ್ಷರೇ, ಒಂದು ಕಡೆ ಬ್ರೈಟ್ ಕೊಡುವುದು ಅಪರಾಧ, ಬ್ರೈಟ್ ಸ್ವೀಕಾರ ಮಾಡತಕ್ಕಂಥ ಅಟೆಂಪ್ಟ್ ಮಾಡುವುದೂ ಅಪರಾಧ. ಇಂಡಿಯನ್ ಫೀನಲ್ ಕೋಡ್‌ನಲ್ಲಿ ಸೆಕ್ಷನ್ 202 ನಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. ನಾನು ನಿಮ್ಮ ಗಮನಕ್ಕೆ ತರುತ್ತೇನೆ. Section 202 of IPC reads thus:

> "Intentional omission to give information of offence by a person bound to inform:- Whoever knowing or having reason to believe that an offence has been committed intentionally omits to give any information respecting that offence which he is legally bound to give shall be punished with imprisonment of either description for a term which may extend to six months or with fine or with both."

ಅಂದರೆ ನಿಮ್ಮಲ್ಲಿರತಕ್ಕಂಥ ಮಾಹಿತಿಯನ್ನು ಕೊಡುವುದಕ್ಕೆ ತಪ್ಪಿದರೆ ನೀವೂ ಕೂಡ ಶಿಕ್ಷೆಗೆ ಒಳಪಡುತ್ತೀರಿ. 202 ಐಪಿಸಿ ಪ್ರಕಾರ you have also committed a criminal offence of not informing police and of not registering a case against them you have hidden that fact. ನೀವು ಯಾವಾಗ ಫ್ಯಾಕ್ಟ್‌ಗಳನ್ನು ಹೈಡ್ ಮಾಡುತ್ತೀರಿ your intention shows that you want to protect particular persons and you are hand-in-glove with them. It is a conspiracy, I can say. ಸೆಕ್ಷನ್ 202ರ ಪ್ರಕಾರ ನೀವೂ ಕೂಡ ಅಪರಾಧ ಮಾಡಿದ್ದೀರಿ. ನೀವೂ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಇಷ್ಟೇ ಅಲ್ಲ, ಒಂದು ವೇಳೆ ನೀವು "ಇಲ್ಲಾ ಅದು ತಪ್ಪು, ನನ್ನ ಹತ್ತಿರ ಬಂದಿಲ್ಲ" ಅಂತ ಹೇಳಿದರೂ ಕೂಡ ಪತ್ರಿಕೆಗಳಿಗೆ ಮತ್ತು ಜನರಿಗೆ ಮಾಧ್ಯಮದ ಮುಖಾಂತರ ಏನು ಹೇಳಿಕೆ ಕೊಟ್ಟಿದ್ದೀರಿ, ಅದು ಸೆಕ್ಷನ್ 203 of IPC - ಪ್ರಕಾರ

"Giving false information respecting an offence committed: Whoever knowing or having reason to believe that an offence has been committed gives any information respecting that offence which he knows or believes to be false shall be punished with imprisonment of either description for a term which may extend to two years or with fine or with both."

ಹಣ ಕೊಡುವುದಕ್ಕೆ ಬರದೇ ಇದ್ದರೂ ಅಥವಾ ಬ್ರೈಬ್ ಕೊಡುವುದಕ್ಕೆ ಬಾರದೇ ಇದ್ದರೂ, ಅವರು ಬಂದಿದ್ದಾರೆಂದು ನೀವು ಹೇಳಿದರೆ ನೀವು 203ರಲ್ಲಿ ನಿಮಗೆ ಫನಿಷ್‌ಮೆಂಟ್ ಆಗುತ್ತದೆ. ಕೊಡುವುದಕ್ಕೆ ಬಂದಿದ್ದಾರೆ ಎಂದು ಹೇಳಿದರೆ

202ರಲ್ಲಿ ನಿಮಗೆ ಶಿಕ್ಷೆ ಆಗುತ್ತದೆ. Either way, you are bound to explain this. ಇಲ್ಲಾ ಸೆಕ್ಷನ್ 202ರ ಪ್ರಕಾರ ನೀವು ಮಾಡಿದಂತಹ ತಪ್ಪನ್ನು ನ್ಯಾಚುರಲಿ ನೀವು ಎಕ್ಸ್‌ಪ್ಲೇನ್ ಮಾಡಬೇಕು. "ಇಲ್ಲ, ಇದು ನನ್ನ ತಪ್ಪಾಗಿದೆ, ನಾನು ಈ ರೀತಿಯಾಗಿ ನಡೆದುಕೊಳ್ಳಬಾರದಿತ್ತು" ಎಂದು ಹೇಳಿ, ಬೇಕಾದರೆ ಮಾರಲ್ ರೆಸ್ಪಾನ್ಸಿಬಿಲಿಟಿ ಹೊತ್ತು ತಾವು ರಾಜೀನಾಮೆ ಕೊಡಿ. ಅದನ್ನು ಬಿಟ್ಟು ಒಂದು ಜೊತೆ ಜೊಶ್ ಮೇಲೆ, ಯಾರಿಗೆ ಬೇಕು ಅವರಿಗೆ reekless ಆಗಿ ಮಾತನಾಡುವುದು, ಯಾರಿಗೆ ಬೇಕು ಅವರಿಗೆ ಹೆದರಿಸುವುದು, ನಾನು ನೋಡಿಕೊಳ್ಳುತ್ತೇನೆ, ಎಂದು ಹೇಳುವುದು ಇದು ಸರಿ ಅಲ್ಲ. "ಇವರೆಲ್ಲಾ ಐವತ್ತು ವರ್ಷ ಇದ್ದರೂ ಜಾತಿಗಳ ಮೇಲೆ ಮಾಡಿದ್ದಾರೆ" ಎಂದು ಹೇಳಿದ್ದಾರೆ. ಬರಲಿ, ಆ ಬಗ್ಗೆ ನಾನು ಮುಂದೆ ಹೇಳುತ್ತೇನೆ, ನಾನು ಸಂದರ್ಭ ಬಂದಾಗ ಹೊರಗೆ ತೆಗೆಯುತ್ತೇನೆ. ಯಾರ್ಯಾರು ಜಾತಿಗಳಲ್ಲಿ, ಯಾರ್ಯಾರು ಫೇವರ್ ಮಾಡಿದ್ದಾರೆ, ಯಾರ್ಯಾರಿಗೆ ತುಳಿದಿದ್ದಾರೆ, ಯಾರ್ಯಾರಿಗೆ ಸಪ್ರೆಸ್ ಮಾಡಿದ್ದಾರೆ, ಇವತ್ತಿನ ದಿವಸ ಯಾರ್ಯಾರಿಗೆ ಬೆನ್ನತ್ತಿದ್ದಾರೆ, ಎನ್ನುವ ಸಂಪೂರ್ಣವಾದ ಮಾಹಿತಿಯನ್ನು ನಾನು ಕೊಡುತ್ತೇನೆ. ಅದನ್ನು ಜಾತಿ ಆಧಾರದ ಮೇಲೆ ಮಾಡಿದ್ದಾರೋ, ಪ್ರೀತಿಯಿಂದ ಮಾಡಿದ್ದಾರೋ ಕಮಿಟ್‌ಮೆಂಟ್ ಮೇಲೆ ಮಾಡಿದ್ದಾರೋ, ಐಡಿಯಾಲಿಜಿ ಇಟ್ಟು ಮಾಡಿದ್ದಾರೋ ಅಥವಾ ಬಡವರ ಮೇಲೆ ಇವರಿಗೆ ಪ್ರೀತಿ ಎನ್ನುವ ರೀತಿಯಲ್ಲಿ ಮಾಡಿದ್ದಾರೋ ಎಂಬುದನ್ನು ನಾನು ಹೇಳುತ್ತೇನೆ. ಆದರೆ ಇವತ್ತು ಸೆಕ್ಷನ್ 202ರ ಪ್ರಕಾರ he has committed an offence. If he has not committed under that section, if he says, it is false, then he has committed offence under Section 203. ಅದಕ್ಕೆ ಇಂತಹವರು– ಈ ರೀತಿಯಾಗಿ ವರ್ತನೆ ಮಾಡುವುದು ಸರಿಯಲ್ಲ, ಮುಖ್ಯಮಂತ್ರಿಗಳಾದ ಮೇಲೆ ತಾಳ್ಮೆಯಿಂದಿದ್ದು, ನೋಡಿಕೊಂಡು, ತಿಳಿದುಕೊಂಡು ಹೇಳುವುದು ಮುಖ್ಯ. ಯಾರಾದರೂ ತಿಳಿದವರು ಹೇಳುವುದಕ್ಕೆ ಹೋದರೆ "ಬಹಳ ಜನರನ್ನು ನೋಡಿದ್ದೇನೆ", ಎಂದು ಹೇಳುವುದು ಸರಿಯಲ್ಲ. ಬೇರೆಯವರು ತಿಳಿದವರು ಹೇಳಿದರೆ, ಅಂದರೆ ಅವರಿಗೆ ಬೇಕಾದವರು ಅವರಿಗೆ ಹೇಳಿದರೆ, ಅದು ಒಳ್ಳೆಯದು, ಅದೇ ಸತ್ಯ ನಮ್ಮ ಬಾಯಿಯಿಂದ ಬಂದರೆ ಅದು ಸರಿಯಿಲ್ಲ. ಈ ವಿಚಾರ ಒಂದು ಕಡೆ. ಇನ್ನೊಂದು ಇದೇ ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಮಾಜಿ ಪ್ರಧಾನ ಮಂತ್ರಿಗಳೂ ಕೂಡ ಒಂದು ಮಾತನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ, ಈ ಬಿಎಂಐಸಿ ಪ್ರಾಜೆಕ್ಟ್‌ಗೆ ಬಿಜೆಪಿಯಲ್ಲೇ ಕೆಲವು ಶಾಸಕರು, for other considerations they are opposing, we want to know what is that other consideration ಏನು ಕಮ್ಯುನಿಟಿ ಕನ್ಸಿಡರೇಷನಾ, ಏನು ದುಡ್ಡಿನ ಕನ್ಸಿಡರೇಷನಾ, ಏನು ಫೆವರ್ಟಿಸಮ್ಮಾ, what is that consideration? - ನಿಮ್ಮ ಪದ್ಧತಿ ಏನೆಂದರೆ, hit and run. ಬಡಿಯುವುದು, ಮಾತನಾಡುವುದು, ಮಾತನ್ನಾಡುವುದು, ಹೊರಟುಬಿಡುವುದು. ಇನ್ನು ಮುಂದೆ ಈ ರೀತಿ ಮಾಡುವುದಕ್ಕೆ

ಸದನದಲ್ಲಿ ಅವಕಾಶವಿಲ್ಲ. ಏನೋ ಪ್ರಾರಂಭದಲ್ಲಿ ಮೂರ್ನಾಲ್ಕು ತಿಂಗಳು ಮಾಡುತ್ತಿದ್ದಾರೆ, ಮಾಡಲಿ ಎಂದು, ಎಲ್ಲರೂ ಸಹಿಸಿಕೊಳ್ಳುತ್ತೇವೆ, ಆದರೆ ಯಾವಾಗ ಸ್ವಾಭಿಮಾನದ ಪ್ರಶ್ನೆ ಬರುತ್ತದೆ, ಆಗ ಯಾರೂ ಕೂಡ ಸಹಿಸಲು ಸಾಧ್ಯವಿಲ್ಲ. ಹೇಗೆ ಅವರಿಗೆ ಸ್ವಾಭಿಮಾನವಿದೆ, ಅಷ್ಟೇ ಸ್ವಾಭಿಮಾನ ನಮಗೂ ಕೂಡ ಇದೆ. ಅದಕ್ಕೆ ಅಧ್ಯಕ್ಷರೆ, ಈ ನಿಲುವಳಿ ಸೂಚನೆಯನ್ನು ನೀವು ಅಲ್ಲೋ ಮಾಡಿ, ಚರ್ಚೆ ಮಾಡಲು ಎಲ್ಲರಿಗೂ ಸಂಪೂರ್ಣವಾಗಿ ಅವಕಾಶ ಕೊಡಿ, ಯಾರು ಮಂತ್ರಿಗಳು, ಯಾರು ಜರ್ನಲಿಸ್ಟ್ ಯಾರು some BJP MLAs, who are the great people, who have influenced to stall that Bill, ಆ ಬಿಲ್‌ನಲ್ಲಿ ಏನಿದೆ ಅದೂ ಕೂಡ ಬರಲಿ. ಅದಕ್ಕಾಗಿ ನಾನು ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. With this submission, I request you to allow adjournment motion for discussion.

ಅಧ್ಯಕ್ಷರು: ಈಗ ಶ್ರೀರಾಮರೆಡ್ಡಿ ಅವರೂ ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ, ಅವರು ಮಾತನಾಡಲಿ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಅಧ್ಯಕ್ಷರೆ, ನಾನು ನಿಲುವಳಿ ಸೂಚನೆ ಮೇಲೆ ಮಾತನಾಡುತ್ತೇನೆ, ಒಂದು ದಿವಸ, ಒಂದೇ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು, ಇದು ನನ್ನ ಸಬ್‌ಮಿಷನ್.

ಅಧ್ಯಕ್ಷರು: ಆಯಿತು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನೂ ಕೂಡ ನಿಲುವಳಿ ಸೂಚನೆಯ ಮೇಲೆ ಮಾತನಾಡಲು ತಮಗೆ ನೋಟೀಸನ್ನು ಕೊಟ್ಟಿದ್ದೇನೆ. ಆಗಲೇ ತಾವು ಖರ್ಗೆಯವರು ಮಾತನಾಡಿದ ಮೇಲೆ ನನಗೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ, ನಿಲುವಳಿ ಸೂಚನೆಯ ಮೇಲೆ ಮಾತನಾಡುವುದಕ್ಕೆ ನಾನೂ ಕೂಡ ತಮಗೆ ನೋಟೀಸ್ ಕೊಟ್ಟಿದ್ದೇನೆ, ಅವರು ಕೊಟ್ಟಿದ್ದರ ಬಗ್ಗೆ ಅವರು ಈಗಾಗಲೇ ಮಾತನಾಡಿದ್ದಾರೆ, ಇಬ್ಬರು ಮುಖಂಡರು ಆಗಲೇ ಆ ಬಗ್ಗೆ ಮಾತನಾಡಿದ್ದಾರೆ.

SRI R.V. DESHPANDE: As per rule, only one adjournment motion could be taken. ಅವರದ್ದನ್ನು ತೆಗೆದುಕೊಂಡಿದ್ದರೆ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು: ಅವರು ಬಿಎಂಐಸಿ ಮೇಲೆ ಕೊಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರಲ್ಲಿ ಇಬ್ಬರು ಮುಖಂಡರು ಈಗಾಗಲೇ ಮಾತನಾಡಿದ್ದಾರೆ.

ಅಧ್ಯಕ್ಷರು: ನೀವು ಕೊಟ್ಟಿರತಕ್ಕಂಥ ಪಾಯಿಂಟ್ ಇಲ್ಲದೇ ಇರಬಹುದು, ಎಲ್ಲಾ ಒಂದೇ ಇರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ: ನಾವು ರಿಸ್ಟ್ರಿಕ್ಟೆಡ್ ವಿಷಯಕ್ಕೆ ಹೋಗಿದ್ದೇವೆಯೇ ವಿನಹ ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಡಿಟೇಲ್ ಆಗಿ ಮಾತನಾಡುವುದಕ್ಕೆ ಇಲ್ಲಿ

ನಾವು ನಿಂತಿಲ್ಲ; ಆ ವಿಷಯ ಬಂದಾಗ ಮಾತನಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ವಿದೇಶ ಪ್ರವಾಸ ಮುಗಿಸಿಕೊಂಡು ಬಂದ ನಂತರ ಸೋಮವಾರ ಏನು ಹೇಳಿಕೆಯನ್ನು ಕೊಟ್ಟರು, ಅದು ಎಲ್ಲಾ ಪತ್ರಿಕೆಗಳಲ್ಲಿ, ಇಡೀ ದೇಶದಲ್ಲಿ ವೈಡ್ಲಿ ಸರ್ಕ್ಯುಲೇಟ್ ಆಗಿದೆ. ನಾಯಕರಾದ ಮಾನ್ಯ ಖರ್ಗೆಯವರು ಹೇಳಿದಂತೆ, ನನ್ನ ದೃಷ್ಟಿಯಿಂದ ಈ ಒಂದು ಸ್ಥಾನದಲ್ಲಿದ್ದು, ಬಹಳ ಬೇಜವಾಬ್ದಾರಿಯಿಂದ ವರ್ತನೆ ಮಾಡಿದ್ದಾರೆ. ಒಂದು ಅವರಿಗೆ ಧೈರ್ಯವಿರಬೇಕು, ಧರ್ಮಸಿಂಗ್ ಗೌರ್ನಮೆಂಟ್‌ನಲ್ಲಿ ಯಾರು ಮಂತ್ರಿಯಾಗಿದ್ದವರು ಅವರ ಹತ್ತಿರ ಬಂದಿದ್ದರೆಂದು ಹೇಳಬೇಕು, ಯಾವ ಜರ್ನಲಿಸ್ಟ್ ಎಂದು ಹೇಳುವ ಧೈರ್ಯ ಅವರಿಗಿರಬೇಕು. ಇವತ್ತು ನೀವು ಎಲ್ಲವನ್ನೂ ಸಂಶಯದಲ್ಲಿ ಹಾಕಿಬಿಟ್ಟಿರಿ, ಧರ್ಮಸಿಂಗ್ ಮಂತ್ರಿಮಂಡಲದಲ್ಲಿ ಯಾರು ಮಂತ್ರಿಯಾಗಿದ್ದರೆಂದರೆ, ನಾನು ಕೂಡ ಮಂತ್ರಿಯಾಗಿದ್ದೆ, ಹಲವಾರು ಜನ ಜನತಾದಳ ಮಂತ್ರಿಗಳಿದ್ದರು, ಇವತ್ತು ಕೆಲವರು ಮಂತ್ರಿಗಳಾಗಿಲ್ಲದೇ ಇರಬಹುದು, ಪ್ರಕಾಶ್ ಇರಬಹುದು, ಸಿಂಧ್ಯಾರವರು ಇರಬಹುದು ಯಾರೇ ಇರಬಹುದು, ಹಾಗಾದರೆ ಯಾರು? ಈಗ ನಾವೆಲ್ಲರೂ ಕ್ಲೌಡ್‌ನಲ್ಲಿದ್ದೇವೆ, the cloud has to be cleared. ನೂರಾರು, ಸಾವಿರಾರು ಜರ್ನಲಿಸ್ಟ್ ಗೌರವದಿಂದ ಮರ್ಯಾದೆಯಿಂದ ಕೆಲಸ ಮಾಡುತ್ತಿದ್ದಾರೆ, ಯಾವ ಜರ್ನಲಿಸ್ಟ್? They are all under suspicion. ಯಾವ ಜರ್ನಲಿಸ್ಟ್ ಮಾಡಿದ್ದಾರೆ? ಇವತ್ತು ಇಂತಹ ಪವಿತ್ರ ಸ್ಥಾನದಲ್ಲಿ ಕುಳಿತು ಬಹಳ ದೊಡ್ಡ ಅಪವಿತ್ರವಾದ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. He is today on the dock Section 202 of IPC of Section 203 is applicable ಅದರ ವಿವರಕ್ಕೆ ನಾನು ಹೋಗುವುದಿಲ್ಲ, ಖರ್ಗೆಯವರು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಕೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಕೇವಲ ನ್ಯಾಯ ಸಲುವಾಗಿ ಅಲ್ಲ, ಮಾರಲ್ ಸಲುವಾಗಿ ಹೆಸರನ್ನು ಬಹಿರಂಗಪಡಿಸಿ, ಯಾವ ಮಂತ್ರಿ ನಿಮ್ಮ ಹತ್ತಿರ ಬಂದಿದ್ದರು, ಯಾವಾಗ ಬಂದಿದ್ದರು, ಮತ್ತು ಇಷ್ಟು ದಿವಸ ಏತಕ್ಕೆ ಸುಮ್ಮನೆ ಕುಳಿತಿದ್ದಿರಿ? ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ನಿಮಗೆ ಮುಂಚಿನಿಂದಲೂ ರಿಸರ್ವೇಶನ್ ಇದೆ, ಇವತ್ತೇನೂ ಇಲ್ಲ, ಇದು ಜಗತ್ತಿಗೆ ಗೊತ್ತಿರುವ ವಿಚಾರ, ಇದೇ ಶಾಸನ ಸಭೆಯಲ್ಲಿ ಏನು ಮಾಡಿದಿರಿ, ದೇಶಪಾಂಡೆಯವರನ್ನು cloudನಲ್ಲಿ ಇಟ್ಟಿದ್ದೀರಿ ಇವತ್ತು ನೀವೇನು ಮಾಡುತ್ತಿದ್ದೀರಿ. ನಾವು ಕೈಗಾರಿಕಾ ಮಂತ್ರಿಯಾಗಿದ್ದಾಗ ಬರೆದ ನೋಟ್‌ಗಳನ್ನು ನೀವು, ನಿಮ್ಮ ಸಹಾಯಕ್ಕೆ ದೇಶಪಾಂಡೆಯವರೂ ಸಹ ಹೇಳಿದ್ದರೆಂದು ತೆಗೆದುಕೊಳ್ಳುತ್ತಿದ್ದೀರಿ. You are taking shelter of our notes to defend your case. ನಿಮಗೆ ನಾಚಿಕೆ ಆಗಬೇಕು. ಪ್ರತಿಯೊಬ್ಬರಿಗೂ ಒಂದು ಗೌರವವಿದೆ, ಶಾಸಕರಿರಬಹುದು, ಸಾಮಾನ್ಯ ಜನರಿರಬಹುದು, ಮಾನ್ಯ ಮುಖ್ಯಮಂತ್ರಿಗಳು, he can't take everybody for a side. ನಿಮ್ಮ ರಾಜೀನಾಮೆಯನ್ನು ನಾನೇನೂ

ಕೇಳಲಿಲ್ಲ, ನಿಮಗೆ ಬಹುಮತವಿದೆ ಎಂದು ನಾವು ಹೇಳಿಲ್ಲ, ನೀವೇ ಹದಿನೈದು ದಿವಸ, ನಾನೇ ಮುಖ್ಯಮಂತ್ರಿಯಾಗಿರುವುದಿಲ್ಲ ಎಂದು ಹೇಳಿದಿರಿ, ನಿನ್ನೆ, ನನ್ನ ಸರ್ಕಾರ ಭದ್ರವಾಗಿದೆ ಎಂದು ಹೇಳಿದಿರಿ, ಓ.ಕೆ. ಒಳ್ಳೆಯ ಕೆಲಸ ಮಾಡಿ, ಜನ ನಿಮಗೆ ಬೆಂಬಲ ಕೊಟ್ಟರೆ ತೆಗೆದುಕೊಳ್ಳಿ, who is against you? - ನೀವೇನೂ ಕೇಳಿಲ್ಲ. ಇವತ್ತು ನಿಮ್ಮ ಪಕ್ಷದ ಅಧ್ಯಕ್ಷರು ಹೇಳುತ್ತಾರೆ, ಬಿಜೆಪಿ ನಾಯಕರೊಳಗೆ ಕನ್ಸಿಡರೇಷನ್ ತೆಗೆದುಕೊಂಡಿದ್ದಾರೆ, what is this? - ಅಂದರೆ ನಿಮ್ಮ ಟಂಗ್ ಮೇಲೆ ಲಗಾಮ್ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಯಾರು ಬಿಜೆಪಿ ನಾಯಕರು, consideration ತೆಗೆದುಕೊಂಡಿದ್ದಾರೆ. Is it a caste consideration or money consideration? you should come out. ಈ ಬಗ್ಗೆ ಸ್ಪಷ್ಟೀಕರಣ ಬರಬೇಕು. ಈ ಮುಖ್ಯಮಂತ್ರಿಗಳ ಹೇಳಿಕೆಯಿಂದ ನಮ್ಮ ಕರ್ನಾಟಕದ ಗೌರವ ಕಡಿಮೆಯಾಗಿದೆ, ಕರ್ನಾಟಕದ ಜನರ ಗೌರವ ಕಡಿಮೆ ಆಗಿದೆ. Prevention of corruption Act Section 5,6,7 ಓದಿ ನೋಡಿ. It is also an offence under prevention of corruption Act. ಹಣ ಕೊಡುವುದು ಅಪರಾಧ ಹಣ ತೆಗೆದುಕೊಳ್ಳುವುದು ಅಪರಾಧ ಹಣ ಯಾರು ಕೊಡುವುದಕ್ಕೆ ಬರುತ್ತಾನಲ್ಲಾ, ಅವನನ್ನು ಮುಚ್ಚಿಡುವುದು ಅಪರಾಧ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಕೇಳುತ್ತೇನೆ. ಮೊನ್ನೆ ಒಂದು ಹೇಳಿಕೆ ಮಾಡಿದರು ಕಾಂಗ್ರೆಸ್ ಲೀಡರ್ಸ್ ಎಲ್ಲಾ ಕರಪ್ಟ್ ಇದ್ದಾರೆಂದು ಹೇಳಿದರು, ನನಗೆ ಎಲ್ಲಾ ಜೆಡಿಎಸ್ ಲಿಡರ್ಸ್ ಕರಪ್ಟ್ ಇದ್ದಾರೆಂದು ಹೇಳುವ ಅಧಿಕಾರವಿದೆಯೇ ಇಲ್ಲ, ಎಲ್ಲಾ ಬಿಜೆಪಿ ಲಿಡರ್ಸ್ ಕರಪ್ಟ್ ಇದ್ದಾರೆಂದು ಹೇಳುವ ಅಧಿಕಾರ ನನಗೆ ಇಲ್ಲ; ಇದರಲ್ಲಿ ಯಡಿಯೂರಪ್ಪನವರು ಇದ್ದಾರೋ ಶೆಟ್ಟರ್‌ರವರು ಇದ್ದಾರೋ ಎಂಬುದನ್ನು ಹೇಳಿ, ನೀವು ಬೇಜವಾಬ್ದಾರಿಯಾಗಿ ಎಲ್ಲಾ ಕಾಂಗ್ರೆಸ್ ಪಾರ್ಟಿ ಎಂದರೆ, ಅದು ಸರಿ ಅಲ್ಲ. ನಿಮ್ಮದೊಂದು ರೀಜನಲ್ ಪಾರ್ಟಿ ಸ್ವಾಮಿ. We are a National Party. We are ruling in 14 States - ನೀವು ನಿಮ್ಮ ಪಾರ್ಟಿಯನ್ನು ಇಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಿಮ್ಮ ಕಡೆ ದಾಖಲೆ ಇದ್ದರೆ, ದೇಶಪಾಂಡೆಯವರೇ, ನೀವು ಇಲ್ಲಿ ಕರಪ್ಷನ್ ಮಾಡಿದ್ದೀರೆಂದು ಹೇಳಿ, ಬಿಎಂಐಸಿ ಪ್ರಾಜೆಕ್ಟ್‌ನಲ್ಲಿ ದೇಶಪಾಂಡೆಯವರ ನಿಮ್ಮದು ಇಷ್ಟು ಜಮೀನಿದೆ ಎಂದು ಹೇಳಿ, ಯಾವುದೇ ಫೋರಂನಲ್ಲಿ ಇನ್‌ಫಾರಂ ಮಾಡಿ, ಅಧಿಕಾರ ನಿಮ್ಮ ಕೈಯಲ್ಲಿದೆ ಮಾಡಿ. ಅದನ್ನು ಮಾಡದೆ, ಇವತ್ತು ನಿಮಗೆ ಮೆಜಾರಿಟಿ ಇದೆ ಎಂದು ಬೇಕಾದ್ದು ಹೇಳಿದರೆ, ಅದು ಸರಿಯಲ್ಲ ಸರ್ಕಾರ ನಡೆಸಬಹುದು ಸ್ವಾಮಿ, ಬಹು ದಿನ ನಡೆಸುವುದಕ್ಕೆ ಸಾಧ್ಯವಿಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. ಇದರಲ್ಲಿ ರಾಜ್ಯದ ಗೌರವದ ಪ್ರಶ್ನೆ ಇದೆ, ಜರ್ನಲಿಸ್ಟ್ ಗೌರವದ ಪ್ರಶ್ನೆ ಇದೆ, ಇವತ್ತು ಅವರು ಮಾಜಿ ಮಂತ್ರಿಗಳಾಗಿರಬಹುದು, ಮಾಜಿ ಮಂತ್ರಿಗಳ ಗೌರವದ ಪ್ರಶ್ನೆ

ಇದೆ, ಇವತ್ತು ಬಿಜೆಪಿ ಮುಖಂಡರ ಗೌರವದ ಪ್ರಶ್ನೆ ಇದೆ. ಇದರಲ್ಲಿ ಯಾರ್ಯಾರು ಇದ್ದಾರೆಂದು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು, You show us. If we are in dock we should be punished. ಶಿಕ್ಷೆ ಕೊಡಿ we are ready to face the punishment. ಅದು ಬಿಟ್ಟು ಎಲ್ಲಾ ಕಾಂಗ್ರೆಸ್ ಲಿಡರ್ಸ್ ಕರಪ್ಟ್ ಇದ್ದಾರೆಂದರೆ, what is this? ಯಾರು ತಾನೇ ಟಾಲರೇಟ್ ಮಾಡುವುದಕ್ಕೆ ಸಾಧ್ಯ? ಇವತ್ತು ರಾಜ್ಯದ ರಾಜಕೀಯ ಇತಿಹಾಸದಲ್ಲಿ, ಯಾವ ಮುಖ್ಯಮಂತ್ರಿಯಾಗಲಿ, ಯಾವ ಮಂತ್ರಿಯಾಗಲಿ, ಯಾವ ಶಾಸಕನಾಗಲಿ ಈ ರೀತಿ ಬೇಜವಾಬ್ದಾರಿ ಆರೋಪವನ್ನು ಯಾವ ಕಾಲದಲ್ಲೂ ಪಕ್ಷದ ಮೇಲೆ ಮಾಡಿಲ್ಲ. ಇರಬಹುದು, ಎಲ್ಲಾ ಪಕ್ಷದಲ್ಲಿ ಹೆಚ್ಚು ಕಡಿಮೆ ಇರುತ್ತದೆ, ಸ್ಪಷ್ಟವಾಗಿ ಹೇಳಿ, ದೇಶಪಾಂಡೆಯವರೇ ಇಲ್ಲಿ ತಪ್ಪು ಮಾಡಿದ್ದೀರೆಂದು ಹೇಳಿ, ನೊ ಪ್ರಾಬ್ಲಂ, ಯಡಿಯೂರಪ್ಪನವರೇ ಮಾಡಿದ್ದೀರೆಂದು ಹೇಳಿ ನೊ ಪ್ರಾಬ್ಲಂ, ಸಾರಸಗಟಾಗಿ ಬಿಜೆಪಿ ಎಲ್ಲಾ ಕರಪ್ಟ್ ಎಂದು ತಪ್ಪಾಗುತ್ತದೆ. Have I right to say that? I have no right to say that. ಪ್ರತಿಯೊಬ್ಬರಿಗೂ ಗೌರವವಿದೆ, ಆತ್ಮಗೌರವವಿದೆ, ಮಾರಲ್ಸ್ ಇದೆ. ಒಂದು ಕೆಲಸ ಮಾಡಿ, ಯಾರು ಹುಟ್ಟಿದಾಗ ಅವರದೇನು ಆಸ್ತಿ ಇತ್ತು, ಇವತ್ತೇನಿದೆ ಎಂಬುದನ್ನು ತನಿಖೆ ಮಾಡಿಬಿಡಿ, ಹುಟ್ಟಿದಾಗ ಅವನದ್ದು ಅವನ ಅಪ್ಪಂದು, ಅವನ ಅಜ್ಜನದು ಆಸ್ತಿ ಏನಿತ್ತು, ಇವತ್ತೇನಿದೆ ಎಂಬುದನ್ನು ತನಿಖೆ ಮಾಡಲು ಒಂದು ಸ್ಪೆಷಲ್ ಕಮಿಷನ್ ನೇಮಕ ಮಾಡಿಬಿಡಿ, we are willing to surrender before the Commission. ಮಾತನಾಡುವುದಕ್ಕೆ ಇತಿಮಿತಿ ಇದೆ, ನಿಮ್ಮ ಕೈಯಲ್ಲಿ ಅಧಿಕಾರವಿದೆ, ಇದು ಸರಿಯಲ್ಲ, ತಾವು ಸ್ವಲ್ಪ ಜವಾಬ್ದಾರಿಯುತವಾಗಿ ಮಾತನಾಡಬೇಕಾಗಿತ್ತು, ಬಹಳ ತಪ್ಪನ್ನು ತಾವು ಮಾಡಿದ್ದೀರಿ, ಹಾಗಾಗಿ ಮಾನ್ಯ ಖರ್ಗೆಯವರು ಹೇಳಿದಂತೆ, Your are liable to be prosecuted under Section 202 and 203 of the IPC and also under Prevention of Corruption Act. You have no right to sit in that position. You have lost legal and moral right. You should resign. I demand that you should resign from the post. This is my demand. Thank you Sir.

ಅಧ್ಯಕ್ಷರು: ಈಗ ನಿಮ್ಮ ಕಡೆಯಿಂದ ಮೂರು ಜನ ಮಾತನಾಡಿದ್ದಾರೆ, ಇದಕ್ಕೆ ಸಂಬಂಧಿಸಿದಂತೆ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರೂ ಕೂಡ ಬೇರೆ ರೀತಿಯಲ್ಲಿ ನೋಟೀಸ್ ಕೊಟ್ಟಿದ್ದಾರೆ, ಅವರು ಸ್ವಲ್ಪ ಮಾತನಾಡಲಿ, ಆಮೇಲೆ I will convert it under Rule 69. ನೀವು ಮಾತನಾಡುವುದಕ್ಕೆ ಬೇಕಾದಷ್ಟು ಕಾಲಾವಕಾಶ ಕೊಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಬಿಎಂಐಸಿ ಪ್ರಾಜೆಕ್ಟ್ ಮೇಲೆ ಮಾತನಾಡುವುದು ಬೇರೆ. ಅದರ ಬಗ್ಗೆ ನಾವೂ ಕೂಡ ಮಾತನಾಡುತ್ತೇವೆ, ಇವತ್ತು ಸ್ಪೆಸಿಫಿಕ್ ಆಗಿ ಮುಖ್ಯಮಂತ್ರಿಗಳು, 13ನೇ ತಾರೀಖು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ, ಆ

ಬಗ್ಗೆ ಇವತ್ತು ಚರ್ಚೆಯಾಗಬೇಕು, ಆ ಬಗ್ಗೆ ಖರ್ಗೆ, ದೇಶಪಾಂಡೆಯವರು ಹೇಳಿದ್ದಾರೆ, ಇನ್ನು ನಮ್ಮ ಇಬ್ಬರು ಸ್ನೇಹಿತರು ಮಾತನಾಡುತ್ತಾರೆ, ರಮೇಶ್ ಕುಮಾರ್‌ರವರು ಮಾತನಾಡಲಿ, ನಿಲುವಳಿ ಸೂಚನೆ ಮೆಲೆ ಮಾತನಾಡಲು ನಮಗೆ ಅವಕಾಶ ಕೊಡಬೇಕು, ಬಿಎಂಐಸಿ ಬೇರೆ, ಈ ಪ್ರಾಜೆಕ್ಟ್ ಮೇಲೆ ಒಂದು ವಾರ ಚರ್ಚೆಯಾಗಬೇಕು, ಒಂದು ವಾರ ಚರ್ಚೆಗೆ ನಾವು ಸಿದ್ಧರಾಗಿ ಬಂದಿದ್ದೇವೆ.

ಅಧ್ಯಕ್ಷರು: ವಾರ ಚರ್ಚೆಯಾದರೆ ಬೇಡಿಕೆಗಳ ಗತಿಯೇನು ಸ್ವಾಮಿ? ಬೇಡಿಕೆಗಳ ಚರ್ಚೆ ಮಾಡಬೇಕಲ್ಲಾ? ಈಗ ನಾನೇನು ಹೇಳುತ್ತೇನೆಂದರೆ, ಈಗಾಗಲೇ ಮೂರು ಜನ ಮಾತನಾಡಿದ್ದೀರಿ, I will convert it. ಅವಕಾಶ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ಅಡ್ಜಮೆಂಟ್ ಮೊಷನ್ ಮೇಲೆ ನೋಟೀಸ್ ಕೊಟ್ಟಿದ್ದೇವೆ, ತಾವು ವಿರೋಧ ಪಕ್ಷದ ನಾಯಕರಿಗೆ ಮಾತನಾಡಬಹುದೆಂದು ಹೇಳಿದಾಗ, ನಮ್ಮ ಅಭಿಪ್ರಾಯವೇನೆಂದರೆ, ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸಿ, ನಿಮ್ಮ ಮನವೊಲಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎನ್ನುವ ಭಾವನೆಯಲ್ಲಿ ನಾವು ಈಗ ಮಾತನಾಡುತ್ತಿದ್ದೇವೆ.

ಅಧ್ಯಕ್ಷರು: ಮೂರು ಜನ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರು ನೋಟೀಸ್ ಕೊಟ್ಟಿದ್ದಾರೆಂದರೆ, ಒಂದೇ ದಿವಸ ಎರಡು ಅಡ್ಜಮೆಂಟ್ ಮೊಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

Mr. SPEAKER: I can clut it.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅಡ್ಜಮೆಂಟ್ ಮೋಷನ್‌ಗೆ ಹೇಗೆ ಕ್ಲಬ್ ಮಾಡುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಎರಡು ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ಯಾರಾದರೂ ಸದಸ್ಯರು ಕೊಡಬಹುದು, ಆದರೆ ಒಂದು ದಿವಸದಲ್ಲಿ ಎರೆಡು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ತಾವು ಇದನ್ನಾದರೂ ಅಲೋ ಮಾಡಬಹುದು, ಅದನ್ನಾದರೂ ಅಲೋ ಮಾಡಬಹುದು. ಆ ಎರಡನ್ನೂ ಕೂಡ ಬೇರೆ ರೂಲಿನ ಕೆಳಗೆ ಪರಿವರ್ತನೆ ಮಾಡಬಹುದು. ತಾವು ಹೇಳಿದಂತೆ ಈ ಸಂದರ್ಭದಲ್ಲಿ ಎರಡ ಅಡ್ಜರ್ನ್‌ಮೆಂಟ್ ಮೋಷನ್‌ಗಳ ಬಗ್ಗೆ ತಾವು ಇನ್ನೂ ನಿರ್ಧಾರಕ್ಕೆ ಬಂದಿಲ್ಲ, ಅವರು ಮನವೊಲಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ, ಅವರಿಗೆ ಅವಕಾಶ ಕೊಡಿ ಮನವೊಲಿಸಲಿ, ಯಾರದ್ದೂ ಆಕ್ಷೇಪಣೆ ಇಲ್ಲ, ಆದರೆ ಎರಡು ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ಕೊಡಬಾರದೆಂದಿಲ್ಲ, ಕೊಡಬಹುದು, ಮೂರು ಕೊಡಬಹುದು, ಆದರೆ ತಾವು ತೆಗೆದುಕೊಳ್ಳತಕ್ಕಂಥದ್ದು ಒಂದನ್ನು ಮಾತ್ರ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ತಮಗೆ ಕೊಟ್ಟಂತಹ ನೋಟೀಸ್‌ನಲ್ಲಿ ಹೀಗೆ ಬರೆದಿದ್ದೇವೆ. "ಮಾನ್ಯ ಮುಖ್ಯಮಂತ್ರಿಗಳನ್ನು

ನೈಸ್ ಕಂಪನಿಯ ಪರವಾಗಿ ಸಂಪರ್ಕಿಸಿ, ರಾಜ್ಯದ ಒಬ್ಬ ಮಾಜಿ ಮಂತ್ರಿ ಹಾಗೂ ಒಬ್ಬ ಪತ್ರಕರ್ತರು ಲಂಚದ ಆಮಿಷ ತೋರಿಸಿದಾಗ್ಯೂ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು, ತಾವು ಮಾರಾಟಕ್ಕಿಲ್ಲವೆಂದು ಬಹಿರಂಗವಾಗಿ ಪ್ರಚಾರಕ್ಕೆ ಎಡೆ ಮಾಡಿಕೊಟ್ಟು, ಮುಖ್ಯಮಂತ್ರಿಯಾಗಿ, ತಾವು ಕೈಗೊಳ್ಳಬೇಕಾಗಿದ್ದ ಕ್ರಮದಲ್ಲಿ ವಿಫಲರಾಗಿರುವುದನ್ನು ನಿಲುವಳಿ ಸೂಚನೆಯಡಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು" ಬರೆದಿದ್ದೇವೆ. ಇದರಲ್ಲಿರುವ ವಿಷಯವೇನೆಂದರೆ ಮೊದಲಿಗೆ ಲಂಚ ತೆಗೆದುಕೊಳ್ಳುವುದು, ಕೊಡುವುದು, ಇವೆಲ್ಲಾ ಇಂಡಿಯನ್ ಪೀನಲ್ ಕೋಡ್‌ನಲ್ಲಿ 161 ರಿಂದ 165ರ ವರೆಗೆ ಬರುತ್ತದೆ. ಅದನ್ನು ರಿಪೀಲ್ ಮಾಡಿ ಪ್ರಿವೆಷನ್ ಆಫ್ ಕರಪ್ಶನ್ ಆ್ಯಕ್ಟ್ ತೆಗೆದುಕೊಂಡು ಬರಲಾಯಿತು. ಈ ಆ್ಯಕ್ಟ್ ಇಂಟ್ರಿಡ್ಯೂಸ್ ಆದ ಮೇಲೆ, ಸೆಕ್ಷನ್ 11 ಮತ್ತು 7 ಅನ್ನು ಪಬ್ಲಿಕ್ ಸರ್ವೆಂಟ್ಸ್‌ಗೆ ಮಾತ್ರ ಸೀಮಿತ ಮಾಡಿದರು. ಸೆಕ್ಷನ್ (8) ಅಂಡ್ (9) ಯಾರು ಪಬ್ಲಿಕ್ ಸರ್ವೆಂಟ್ಸ್ ಡೆಫಿನೆಷನ್ ಕೆಳಗೆ ಬರುವುದಿಲ್ಲ ಅವರಿಗೆ ಅನ್ವಯಿಸುತ್ತದೆ. There are settled laws, ನಾವೆಲ್ಲರೂ ಶಾಸಕರು ಮೊದಲುಗೊಂಡು, ಮಂತ್ರಿಗಳು, ಮುಖ್ಯಮಂತ್ರಿಗಳೆಲ್ಲರೂ ಪಬ್ಲಿಕ್ ಸರ್ವೆಂಟ್ಸ್ ಡೆಫಿನೇಷನ್ ಕೆಳಗೆ ಬರುತ್ತೇವೆ. ಇದರ ಕೆಳಗೆ ಬಂದಾಗ ಇಂತಹ ಒಂದು ಸನ್ನಿವೇಶದಲ್ಲಿ ಬಹಳ ಸ್ಪಷ್ಟವಾಗಿ ಕಾನೂನು ಹೇಳುತ್ತದೆ. ಪ್ರಿವೆನ್‌ಷನ್ ಆಫ್ ಕರಪ್ಶನ್ ಆ್ಯಕ್ಟ್ ಸೆಕ್ಷನ್ 12ರ ಪ್ರಕಾರ ಈ 7 ಅಥವಾ 11 ಕೆಳಗಿರುವ, ಪಬ್ಲಿಕ್ ಸರ್ವೆಂಟ್ಸ್ ಆಗಿರುವವರು, ಈ ತರಹದ ಆಕರ್ಷಣೆಗೆ ಎದುರಾದಾಗ ಯಾರು ಅವರಿಗೆ ಆಮಿಷ ತೋರಿಸುವುದಕ್ಕೆ ಹೋಗುತ್ತಾರೆ, ಅವರು ಫಸ್ಟ್ ಅಕ್ಯೂಸ್ಡ್ ಆಗುತ್ತಾರೆ. ಅಂತಹ ವಿಚಾರ ತಮ್ಮ ಗಮನಕ್ಕೆ ಬಂದ ತಕ್ಷಣ, ಯಾರು ತಮ್ಮ ಅಧಿಕಾರದ ವರ್ಚಸನ್ನು ಉಪಯೋಗಿಸಿ ಲಂಚ ಕೊಡುವುದಕ್ಕೆ ಬರುತ್ತಾರೆ, ಅವರಿಗೆ ಸಹಾಯ ಮಾಡತಕ್ಕಂಥ ಸ್ಥಿತಿಯಲ್ಲಿ ತಾವು ಇರುತ್ತಾರೆ ಅದನ್ನು ತಿಳಿದುಕೊಂಡು "ನನ್ನನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಂದಿದ್ದಾರೆ, ನಾನು ಪಬ್ಲಿಕ್ ಸರ್ವೆಂಟ್ ಆಗಿ ನಾನು ತೆಗೆದುಕೊಂಡಿರುವ ಪ್ರಮಾಣವಚನ ಸ್ವೀಕಾರ ಮಾಡಿರುವ ಕ್ರಿಯೆಗೆ ಇದು ತದ್ವಿರುದ್ಧವಾದುದ್ದಾಗುತ್ತದೆ, ರಾಜ್ಯಕ್ಕೆ ಅನ್ಯಾಯವಾಗುತ್ತದೆ, ಸಾರ್ವಜನಿಕರಿಗೆ ಅನ್ಯಾಯವಾಗುತ್ತದೆ" ಎಂಬುದು ತನಗೆ ಮನದಟ್ಟಾದಾಗ, ಆ ತಕ್ಷಣದಲ್ಲಿ ಆತ ಮಾಡಬೇಕಾದ ಬೇರೆ ಕೆಲಸವನ್ನೂ ಕೂಡ ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು, ಒಂದು ದಿವಸ ಬೆಳಿಗ್ಗೆ ಎದ್ದು ಈ ಹೇಳಿಕೆಯನ್ನು ಮಾಡಿದ್ದಾರೆ". ಒಬ್ಬ ಮಂತ್ರಿಯಾಗಿದ್ದವರು, ಒಬ್ಬ ಪತ್ರಕರ್ತರಾಗಿರುವವರು ನನ್ನ ಬಳಿಗೆ ಬಂದರು ಈ ವಿಷಯವನ್ನು ಪ್ರಸ್ತಾಪ ಮಾಡಿದರು, ನಾನು ಅದಕ್ಕೆ ಜಗ್ಗುವ ಮನುಷ್ಯನಲ್ಲ ಎಂದು ಹೇಳಿದರು, ನಮಗೆ ಬಹಳ ಹೆಮ್ಮೆ, ಇಂತಹದ್ದಕ್ಕೆಲ್ಲಾ ಬಗ್ಗದೆ ಇರತಕ್ಕಂಥ ಒಬ್ಬ ಆದರ್ಶವಾದಿ ಮುಖ್ಯಮಂತ್ರಿ ಇದ್ದಾರೆಂಬುದೇ ನಮಗೆಲ್ಲಾ

ಹೆಮ್ಮೆಯ ವಿಷಯ. ಈ ರಾಜ್ಯದಲ್ಲಿ ಅನೇಕ ಜನ ಮಂತ್ರಿಗಳಾಗಿ ಹೋಗಿದ್ದಾರೆ, ಮಂತ್ರಿಗಳಾಗಿ ಹೋಗಿ, ಇನ್ನು ಜೀವಂತವಾಗಿರುವವರು, ಕೆಲವರು ದಿನನಿತ್ಯದ ಜೀವನಕ್ಕೂ ಕೂಡ ಒದ್ದಾಡುತ್ತಿರತಕ್ಕಂಥ ಗೌರವಸ್ಥರು ಕೆಲವರು ಇದ್ದಾರೆ. ಆರು ತಿಂಗಳೋ ಎಂಟು ತಿಂಗಳೋ ಒಂದು ವರ್ಷವೋ, ಎರಡು ವರ್ಷವೋ ಮಂತ್ರಿಗಳಾಗಿದ್ದವರು ಮೂರು ತಲೆಮಾರಿಗೆ ಆಗುವಷ್ಟು ಹಣ ಮಾಡಿಕೊಂಡಿರುವ ಪುಣ್ಯಾತ್ಮರೂ ಕೂಡ ಇದ್ದಾರೆ. ಆ ಜೀವನ ನಡೆಸುವುದಕ್ಕೆ ಕಷ್ಟವಾಗಿರತಕ್ಕಂಥ ಮಾಜಿ ಮಂತ್ರಿಗಳಿದ್ದಾರಲ್ಲಾ, ಅವರೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯ ಪ್ರಕಾರ ಅಕ್ಯೂಸ್ಡ್, ಕಾರಣವೇನು? ನೀವು ಯಾರೆಂದು ಹೇಳಲಿಲ್ಲ. ಅಧ್ಯಕ್ಷರೇ, ನಾವು ಈ ಸದನಕ್ಕೆ ಬಂದಾಗ 1978ನೇ ಇಸವಿಯಲ್ಲಿ ನಮಗೆ ಆಗ ತಾನೇ ಪ್ರಾಯ, 27, 28 ವಯಸ್ಸು. ರಘುರಾಮಶೆಟ್ಟರು, ಮೈಸೂರು ಮಠರು, ಜಯಶೀಲರಾಯರು, ರಾಮ್‌ಪ್ರಸಾದ್‌ರವರು ಅನೇಕ ಜನ ಒಬ್ಬರಲ್ಲ ಇಬ್ಬರಲ್ಲ, ಸತ್ಯರವರು, ಸುಬ್ಬರಾಯರು, ಒಬ್ಬ ಜರ್ನಲಿಸ್ಟ್ ಆ ಹರಕಲು ಹವಾಯ್ ಚಪ್ಪಲಿಗೆ ಪಿನ್ ಹಾಕಿಕೊಂಡು ಆ ಸಿಗರೇಟ್ ತುದಿಗೆ ಇಟ್ಟುಕೊಂಡು, ಆ ಪೈಜಾಮ, ಜುಬ್ಬವೆಲ್ಲಾ ಹತ್ತಿರದಿಂದ ನೋಡುವುದಕ್ಕೆ ಆಗುವುದಿಲ್ಲ, ಆ ರೀತಿಯ ಸ್ಥಿತಿಯಲ್ಲಿದ್ದರೂ ಕೂಡ ಮುಖ್ಯಮಂತ್ರಿಯಾದಿ ಎಲ್ಲರೂ ಅವರನ್ನು ನೋಡಿದರೆ ಗಡಗಡನೆ ನಡುಗುತ್ತಿದ್ದರು. ಅಂಥ ವೃತ್ತಿ ತತ್ಪರತೆಯಿಂದ ಇರತಕ್ಕಂಥವರು, ಪ್ರಾಮಾಣಿಕ ಜರ್ನಲಿಸ್ಟ್ ಇವತ್ತಿಗೂ ಇದ್ದಾರೆ. ನಮ್ಮ ಕ್ಯಾಟೆಗೊರಿಯವರು ಅವರಲ್ಲೂ ಇದ್ದಾರೆ. ಇಲ್ಲ ಅಂತ ಅಲ್ಲ. ಅವರ ಕತೆಯೇನು ಈಗ? ನಾವು ಇಲ್ಲಿ ಯಾರಾದರೂ ತಪ್ಪು ಮಾಡಿದರೆ ಜನರಿಗೆ ನಮ್ಮ ಬಗ್ಗೆ ತಿಳುವಳಿಕೆ ಮಾಹಿತಿ ಕೊಡತಕ್ಕಂಥ ಜವಾಬ್ದಾರಿಯನ್ನು ಹೊತ್ತಂಥ ಇವರು, they are also under cloud today. ಇವರ ಸಂಬಂಧಿಕರು, ಸ್ನೇಹಿತರು, ವೆಲ್‌ವಿಷರ್ಸ್, ಕ್ರಿಟಿಕ್ಸ್ ಇವರನ್ನು ಯಾರು ಬೇಕಾದರೂ ಹಿಡಿದು ನಿಲ್ಲಿಸಿ ಕೇಳಬಹುದು. ನೀನೇನಾ ಹೋಗಿದ್ದುದು ಎಂದು ಕೇಳಬಹುದು. ಬ್ರೋಕರ್ ಕೆಲಸವನ್ನು ಯಾವಾಗಿನಿಂದ ಮಾಡುತ್ತಿದ್ದೀಯಾ ಎಂದು ಕೇಳಬಹುದು. ಒಂದೇ ಹೊಡೆತಕ್ಕೆ ಎಷ್ಟು ಜನರನ್ನು ತಮ್ಮ ಕಂಟ್ರೋಲ್‌ಗೆ ತೆಗೆದುಕೊಂಡು ಬಿಟ್ಟರು ನೋಡಿ ಮಾನ್ಯ ಮುಖ್ಯ ಮಂತ್ರಿಗಳು. ಹೇಗೆ ಇವರೆಲ್ಲಾ ಪಾರಾಗುವುದು? ಅವರು ಸ್ಪಷ್ಟವಾಗಿ ಹೇಳಬೇಕು. "ಇಂಥಿಂಥವರು ಇಂಥಿಂಥ ಅಪರಾದವನ್ನು ಮಾಡಿದ್ದಾರೆ, ಈಗ ಡೇಟ್‌ಗೆ ಇಷ್ಟು ಹೊತ್ತಿಗೆ ಇವರು ಬಂದಿದ್ದರು ಆಮೇಲೆ ಇವರು ಬಂದಿದ್ದರು" ಮತ್ತೆ ನನಗೆ ಆಶ್ಚರ್ಯ. ಏನು ಅವರು ಕೊಟ್ಟಿದ್ದು ಸಾಲದು ಎಂದು ನೀವು ಕಳುಹಿಸಿಬಿಟ್ಟಿರಾ? ಅವರು ಸೂಚನೆ ಮಾಡಿದ ಮೊತ್ತ ಸಾಕಾಗುವುದಿಲ್ಲ, ನಮ್ಮ ಡಿಮ್ಯಾಂಡ್ ಜಾಸ್ತಿ ಇದೆಯಪ್ಪ, ಖರ್ಚು ಜಾಸ್ತಿ ಇದೆಯಪ್ಪ, ಅದಕ್ಕೆ ಕಟ್ಟಬೇಕು, ಚುನಾವಣೆ ಹತ್ತಿರದಲ್ಲಿದೆ, ಈ ಸರ್ಕಾರ ಯಾವಾಗ ಬಿದ್ದುಹೋಗುತ್ತದೋ ಗೊತ್ತಿಲ್ಲ, ಎಂದು ಹೇಳಿ ಹಾಗೆ ಮಾಡಿದಿರಾ ಅಥವಾ

11.00 A.M.

ರಾಜ್ಯದ ಬೊಕ್ಕಸಕ್ಕೆ, ಅನ್ಯಾಯ ಮಾಡುವುದಿಲ್ಲ, ನಾವು ಅಭಿವೃದ್ಧಿ, ಅಭಿವೃದ್ಧಿ ಒಂದೇ ಜಪ, ಒಂದೇ ಮಂತ್ರ, ನಮ್ಮದು ಅಭಿವೃದ್ಧಿರಂಗ ಎನ್ನುವ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೇವೆ, ಆದ್ದರಿಂದ ಈ ಕೆಲಸವನ್ನು ಮಾಡುವುದಿಲ್ಲವೆಂದು ಹೇಳಿ ಹೇಳಿದಿರಾ? ಮೊದಲನೆಯದಾಗಿ, ಪ್ರಾಥಮಿಕವಾಗಿ ಮುಖ್ಯಮಂತ್ರಿಯಾಗಿ ಇದು ಕಾನೂನು ರೀತ್ಯಾ ಲಂಚದ ಆಮಿಷವನ್ನು ಒಡ್ಡತಕ್ಕದ್ದು ಅಪರಾಧ ಎನ್ನುವ ವಿಷಯ ತಮ್ಮಗೆ ತಿಳುವಳಿಕೆ ಇರಬೇಕಾಗಿತ್ತು. ಇದೆ ಎಂದು ನನ್ನ ಭಾವನೆ. ಅದಾದ ಮೇಲೆ ಅವರು ಆಮಿಷವನ್ನು ಒಡ್ಡಿದಾಗ ಕಾನೂನು ರೀತ್ಯಾ ನಿಮಗೆ ಇದ್ದಂಥ ಒಂದೇ ಮಾರ್ಗ ಇಮ್ಮೆಡಿಯೇಟ್ ಆಗಿ ತಾವು ಪೊಲೀಸ್ ಸ್ಟೇಷನ್‌ಗೆ ಅವರ ಮೇಲೆ ಕಂಪ್ಲೇಂಟನ್ನು ಕೊಡಬೇಕಾಗಿತ್ತು. ಅದನ್ನೇ ಮಾನ್ಯ ಖರ್ಗೆಯವರು ಸೆಕ್ಷನ್ ಐಪಿಸಿ 202 ಮತ್ತು 203 ಅದನ್ನು ಓದಿ ಹೇಳಿದ್ದು. ಪುನಃ ನಾನು ಓದಿ ನಿಮ್ಮ ಸಮಯವನ್ನು ಹಾಳು ಮಾಡಲಿಕ್ಕೆ ನಾನು ತಯಾರಾಗಿಲ್ಲ. It is a cognizable offence. ಈಗ ಇತ್ಯರ್ಥ ಆಗದೇ ಉಳಿದಿರತಕ್ಕ ಸಮಸ್ಯೆಗಳು ನಮ್ಮೆದುರಿಗೆ ಇವೆ. ನಿಮಗೆ ಇದು ಅಪರಾಧವೆಂದು ಗೊತ್ತಿದ್ದೂ ಅವರು ಬಂದಿರತಕ್ಕಂಥವರು ಅಪರಾಧಿಗಳು ಎಂದು ಗೊತ್ತಿದ್ದೂ ಇದೊಂದು ಗುರುತರವಾದ ಆಪಾದನೆ ಎಂದು ಹೇಳಿ ನೀವು ಪೋಲೀಸ್ ಕಂಪ್ಲೇಂಟನ್ನು ಕೊಡದೆ ಸುಮ್ಮನಾಗಿದ್ದರೆ ಇದು ಉದ್ದೇಶಪೂರ್ವಕವಾಗಿ ಪ್ರಜ್ಞಾಪೂರ್ವಕವಾಗಿ ಬುದ್ಧಿಪೂರ್ವಕವಾಗಿ ನೀವು ಮಾಡಿದ್ದೀರಿ. ಇಂಟೆನ್ಸ್‌ನಲ್ಲಿ ಓಮಿಷನ್ ಎನ್ನತಕ್ಕಂಥ ಅಪ್ರೋಪ್ರಿಯೇಟ್ ವರ್ಡಿಂಗ್ ಏನಿದೆ, ಐಪಿಸಿ ಸೆಕ್ಷನ್ 202 ರಲ್ಲಿ intentional omission, intentional omission it is a clear case of ಅಥವಾ ನಿಮಗೆ ತಿಳುವಳಿಕೆ ಇಲ್ಲ. ಈ ಕನಿಷ್ಟ ಪ್ರಮಾಣದ ತಿಳುವಳಿಕೆ ಇಲ್ಲದೇ ಇರುವ ಒಬ್ಬ ವ್ಯಕ್ತಿ ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿಯಬಹುದೇ? There are the two things that are to be resolved. ಅದಕ್ಕೆ ಸಂಬಂಧಿಸಿದ ಉಳಿದ ಮಾಹಿತಿಗಳನ್ನು, ವಿವರಗಳನ್ನು ತಾವು ದೊಡ್ಡ ಮನಸ್ಸು ಮಾಡಿ ನಮ್ಮ ನಿಲುವಳಿ ಸೂಚನೆಗೆ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ನಾನು ಒಪ್ಪಿದ್ದೇನೆ, ನನ್ನ ಮನಃ ನಿಮ್ಮ ಪರವಾಗಿದೆ, ನೀವು ಡೀಟೈಲ್ಸ್‌ಗೆ ಬರಬಹುದೆಂದರೆ ನಾವು ಬರುವುದಕ್ಕೆ ತಯಾರಾಗಿದ್ದೇವೆ. ಇವರು ಬಹಳ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ನಾನು ಹಾಗೆ ಬದುಕುವುದಿಲ್ಲವೆಂದು ಹೇಳಿದ್ದಾರೆ. ಖುಷಿ ನಮಗೆ. ಎಲ್ಲರ ಜನ್ಮ ಜಾಲಾಡುತ್ತೇವೆ. ನಾವು ಅದಕ್ಕಾಗಿಯೇ ಕಾಯುತ್ತಿರುವುದು. ಯಾರಾದರೂ ಒಬ್ಬ ಪುಣ್ಯಾತ್ಮ ಅವತಾರ ಪುರುಷ ಹುಟ್ಟುತ್ತಾನೆ, ಈ ಭ್ರಷ್ಟರ ಜನ್ಮವೆಲ್ಲಾ ಜಾಲಾಡುತ್ತಾನೆ, ಅದು ನಮಗೂ ಕೂಡ ಬೇಕಾಗಿದೆ. ಈ ರಾಜ್ಯ ಪರಿಶುದ್ಧವಾಗಬೇಕು. ಎಷ್ಟು ದಿವಸ ಎಂದು ಇಂಥವರ ಮರ್ಜಿ, ಮುಲಾಜು, ಹಂಗಿನಲ್ಲಿ ಬದುಕುವುದಕ್ಕಾಗುತ್ತದೆ ಅಧ್ಯಕ್ಷರೇ? ಗೌರವದಿಂದ, ಪ್ರಾಮಾಣಿಕತೆಯಿಂದ, ಸ್ವಾಭಿಮಾನದಿಂದ ಬದುಕತಕ್ಕಂಥವರಿಗೆ ಸಾರ್ವಜನಿಕ ಜೀವನದಲ್ಲಿ ಜಾಗವೇ

ಇಲ್ಲ ಎನ್ನುವ ದುಸ್ತರ ಬಂದುಬಿಟ್ಟಿದೆ. ನೀವು ಆ ಕೆಲಸವನ್ನು ಮಾಡಿದರೆ ಆನಂದಪಡುತ್ತಿದ್ದೆವು. ನಿಮಗೆ ಸ್ವಾಭಿಮಾನ ಇದೆ ಎಂದು ನನ್ನ ವಿಶ್ವಾಸ. ಈ ಎರಡು ವಿಷಯಗಳಿಗೆ ಗೊತ್ತಿದ್ದೂ, ಎಲ್ಲ ವಿಷಯ ತಿಳಿದಿದ್ದೂ ಕಾನೂನಿನ ಅರಿವಿದ್ದು ನೀವು ಪೋಲೀಸ್ ಸ್ಟೇಷನ್‌ಗೆ ಹೋಗಿ ಅವರ ವಿರುದ್ಧ ಕಂಪ್ಲೇಂಟನ್ನು ಕೊಡದೇ ಇದ್ದುದ್ದು ಅಪರಾಧ ಎಂದು ಹೇಳಿ ಗೊತ್ತಿದ್ದೂ ನೀವು ಮಾಡದಿದ್ದರೆ ಅದು unpardonable crime ನೀವು ಆ ಕ್ರೈಮನ್ನು ಕಮಿಟ್ ಮಾಡಿ, you cannot continue in office. "ಬೈ ಛಾನ್ಸ್, ಇದು ನನಗೆ ಗೊತ್ತಿರಲಿಲ್ಲ ಏನೆಲ್ಲಾ ಹೇಳಿದೆ, ಅವತ್ತೇ ಹೋಗಿ ಕಂಪ್ಲೇಂಟ್ ಕೊಡಬೇಕಾಗಿತ್ತು ಎನ್ನುವುದು, ಏನೋ ನಮ್ಮ ಕೊಲೀಗ್, ಜರ್ನಲಿಸ್ಟ್, ಪರಿಚಯ ಇರುವವರೆಲ್ಲಾ ಹೀಗೆ ಅನೇಕ ಜನ ಬರುತ್ತಾರೆ, ಮುಖ್ಯಮಂತ್ರಿ ಆದವರನ್ನು ನೋಡುವುದಕ್ಕೆ. ಹಾಗಾಗಿ ನಾನು I took it easy" ಎನ್ನತಕ್ಕ ದೃಷ್ಟಿಯಿಂದ ಮಾತನಾಡಿದ್ದರೆ, ignorance is no bliss. ನಿಮಗೆ ಆ ಅರಿವು ಇಲ್ಲದಿದ್ದ ಮೇಲೆ ರಾಜ್ಯಕ್ಕೆ ಕ್ಷೇಮವಲ್ಲ ನೀವು ಮುಖ್ಯಮಂತ್ರಿಯಾಗಿ ಮುಂದುವರಿಯುವುದು. ರಾಜ್ಯದ ಕ್ಷೇಮದ ಹಿತದೃಷ್ಟಿಯಿಂದ ಏನು ನಿರ್ಣಯವನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ನಿಮ್ಮ ವಿವೇಚನೆಗೆ ಬಿಡುತ್ತೇನೆ ಎನ್ನುವ ಮಾತನ್ನು ಹೇಳಿ ನನಗೆ ಈ ಅವಕಾಶವನ್ನು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಇದನ್ನು ನಿಯಮ 69ರ ಕೆಳಗೆ ಕನ್‌ವರ್ಟ್ ಮಾಡಿ ಅವಕಾಶವನ್ನು ಮಾಡಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು ಕನ್‌ವರ್ಟ್ ಮಾಡುವ ಮೊದಲು ಇದನ್ನು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಏಕೆ ತೆಗೆದುಕೊಳ್ಳಬೇಕು ಎಂದರೆ, it is a very very .....

ಅಧ್ಯಕ್ಷರು: ಈಗ ಹೇಳಿದ್ದೀರಿ, ನಾಲ್ಕು ಜನರೂ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ನಮ್ಮ ಸಬ್‌ಮಿಷನ್ ಆದನಂತರ ರೂಲಿಂಗ್ ಪಾರ್ಟಿಯವರು ಏನು ಹೇಳಬೇಕಾಗಿತ್ತಲ್ಲಾ, ಅವರನ್ನು ಕೇಳದೆ ನಿಯಮ 69ರ ಕೆಳಗೆ ಕನ್‌ವರ್ಟ್ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರುಗಳು ಬಹಳ ಹಲವಾರು ವರ್ಷಗಳ ಅನುಭವ ಇರತಕ್ಕವರು, ಕಾನೂನಿನ ಪರಿಣಿತರು, ಈ ದೇಶದಲ್ಲಿ ರಾಷ್ಟ್ರೀಯ ಪಕ್ಷವಾಗಿರತಕ್ಕಂಥ ಪಕ್ಷದ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ, ಇವತ್ತು ನನಗೆ ಕಾನೂನಿನ ಅನುಭವ ಇದೆಯೋ ಅಥವಾ ಇಲ್ಲವೋ, ಇವತ್ತು ಹಲವಾರು ಸೆಕ್ಷನ್‌ಗಳ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಹಾಗೂ ವಿರೋಧ ಪಕ್ಷದ

ನಾಯಕರು ಒಂದು ವಾರಗಳ ಕಾಲ ಚರ್ಚೆಯನ್ನು ಮಾಡಬೇಕು ಎಂದೂ ಹಲವಾರು ವಿಷಯಗಳು ಇದ್ದಾವೆ ಎಂದೂ ಹೇಳಿದ್ದಾರೆ, ಇವತ್ತು ಎಲ್ಲಾ ರೀತಿಯ ಚರ್ಚೆಗೆ ನಾನು ಸಿದ್ದನಿದ್ದೇನೆ. ಹೆದರಿ ಹೋಗತಕ್ಕಂಥ ಅವಶ್ಯಕತೆಯೂ ಇಲ್ಲ. ನಾನು ರಾಜೀನಾಮೆ ಕೊಡಬೇಕಾದಂಥ ಮಹಾನ್ ತಪ್ಪನ್ನು ಏನೂ ಮಾಡಿಲ್ಲ. ಇವತ್ತು ಮಾನ್ಯ ದೇಶಪಾಂಡೆಯವರು ಮರೆತಿದ್ದಾರೆ. ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ದೇವೇಗೌಡರು ಕನಕಪುರ ಚುನಾವಣೆಯಲ್ಲಿ ಗೆದ್ದ ನಂತರ ಈ ಕ್ಷೇತ್ರದ ಲೋಕಸಭಾ ಸದಸ್ಯರಾಗಿ ಕೆಲಸವನ್ನು ಮಾಡಬೇಕಾದರೆ ಆ ಭಾಗದ ರೈತರು ಅವರ ಮುಂದೆ ಏನು ಈ ಬಿಎಂಐಸಿ ವ್ಯವಹಾರದೊಳಗೆ ಆಗಿರತಕ್ಕ ತಪ್ಪುಗಳ ಬಗ್ಗೆ ಅವರ ಗಮನವನ್ನು ಸೆಳೆದಾಗ ಮೊದಲನೇ ಬಾರಿಗೆ ದೇವೇಗೌಡರು ಆ ಒಂದು ವಿಷಯದ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದಾಗ, ಸನ್ಮಾನ್ಯ ದೇಶಪಾಂಡೆಯವರು ಒಂದು ಮಾತನ್ನು ಹೇಳಿರುವುದನ್ನು ಅವರು ಮರೆತಿರಬಹುದು. ನೈಸ್ ಕಂಪನಿಯವರು....

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಒಂದು ನಿಮಿಷ. ನೀವು ಮಾತನಾಡಬೇಕಾದಾಗ ನಾನು ಮಾತನಾಡಿಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಏನು ಹೇಳುತ್ತಾರೋ ಹೇಳಲಿ ಧರ್ಮಸಿಂಗ್‌ರವರೇ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಚರ್ಚೆಗೆ ನಾವು ತಯಾರಿದ್ದೇವೆ. ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಇವತ್ತು ನಾವು ನಿಲುವಳಿ ಸೂಚನೆಯನ್ನು ತಂದಿದ್ದು 13ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಒಬ್ಬ ಪತ್ರಕರ್ತ ಮತ್ತೊಬ್ಬ ಮಾಜಿ ಮಂತ್ರಿಗಳು ನನ್ನ ಸಂಪುಟದಲ್ಲಿ ಇದ್ದವರು. ಅವರ ಬಗ್ಗೆ ಹೇಳಿಕೆ ನೀಡಿದ್ದಾರೆ. ಅದರ ಬಗಗೆ ನಾವು ಕೇಳಿದ್ದೇವೆ. ಇವತ್ತು ಅದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಬಿಐಎಂಸಿ ಪ್ರಾಜೆಕ್ಟ್ ಬಗ್ಗೆ, we will come later on.

(ಗೊಂದಲ)

ಶ್ರೀ ಅಲಂಗೂರು ಶ್ರೀನಿವಾಸ್: ಒಬ್ಬೊಬ್ಬರ ಬಂಡವಾಳ ಹೇಳಿದರೆ ಗೊತ್ತಾಗುತ್ತೆ.

(ಗೊಂದಲ)

ಅಧ್ಯಕ್ಷರು: ಈಗ ನಾಯಕರು ಮಾತನಾಡಲಿ. ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರುಗಳ ಭಾವನೆಗಳೇನು ಇದ್ದಾವೆ, ನಾನು 13ನೇ ತಾರೀಖು ಕೊಟ್ಟಿರತಕ್ಕ

ಹೇಳಿಕೆ ಬಗ್ಗೆ ವಿಸ್ತಾರವಾಗಿ ಚರ್ಚೆಯಾಗಲಿ. ನಾನು ಸಿದ್ದ ಇದ್ದೇನೆ. ನಾನು ಯಾವುದೇ ರೀತಿಯ ತಪ್ಪು ಮಾಡಿ ಇನ್ನೊಬ್ಬರ ಕೈಯಲ್ಲಿ ಛೀ, ಥೂ ಎಂದು ಹೇಳಿ ಉಗಿಸಿಕೊಂಡು ಹೋಗುವ ಮಟ್ಟಕ್ಕೆ ನಾನು ಇಳಿಯುವುದಿಲ್ಲ. ನಾನು ಇಳಿಯಬೇಕೆಂದ ದಿವಸ ನಾನೇ ಗೌರವಯುತವಾಗಿ ಇಳಿದು ಹೋಗುತ್ತೇನೆ. ನಿಮ್ಮ ಕೈಯಲ್ಲಿ ಹೇಳಿಸಿಕೊಂಡು ನಾನು ರಾಜೀನಾಮೆ ಕೊಡಬೇಕಾದ ಅವಶ್ಯಕತೆ ಇಲ್ಲ. ನಾನು ನಿಮಗೆ ಒಂದು ಜ್ಞಾಪಕ ಪಡಿಸಲು ಬಯಸುತ್ತೇನೆ. ಬಿಎಂಐಸಿ ವಿಷಯದಲ್ಲಿ ಆವತ್ತು ಲೋಕಸಭಾ ಸದಸ್ಯರಾಗಿ ವಿಷಯವನ್ನು ಪ್ರಶ್ನೆ ಮಾಡಿದಾಗ ಶ್ರೀಮಾನ್ ದೇಶಪಾಂಡೆಯವರು ಆವತ್ತು ಮಂತ್ರಿಗಳಾಗಿ.....

ಅಧ್ಯಕ್ಷರು: ಗಂಭೀರವಾಗಿ ಕೇಳ್ರಿ. ಇದೇನ್ರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇವತ್ತು ದೇವೇಗೌಡರು ಪ್ರಶ್ನೆಯನ್ನು ಮಾಡುತ್ತಿರತಕ್ಕಂಥದ್ದು....

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ತಾವು ರಾಷ್ಟ್ರೀಯ ಪಕ್ಷವಾಗಿ ಈ ದೇಶ ಉಳಿಸಿರುವುದು ಗೊತ್ತಿದೆ. ಕುಳಿತುಕೊಳ್ರಿ. ದೇವೇಗೌಡರಿಗೆ ಸೂಟ್‌ಕೇಸ್ ಕೊಡಲಿಲ್ಲವೆಂದು ಹೇಳಿ.....

ಅಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ದಯಮಾಡಿ ಗಂಭೀರವಾದ ವಿಚಾರ. ಕೇಳಿ ದಯಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ದೇವೇಗೌಡರು ಈ ಪ್ರಶ್ನೆಯನ್ನು ಎತ್ತಿರತಕ್ಕದ್ದು ನೈಸ್ ಕಂಪನಿಯ ಮಾಲೀಕರು ಸೂಟ್‌ಕೇಸನ್ನು ಕೊಟ್ಟಿಲ್ಲವೆಂದು ಹೇಳಿ ಅವರು ಪ್ರಶ್ನೆಯನ್ನು ಎತ್ತಿರಬಹುದು ಎಂದು ತಾವೇನು ಮಂತ್ರಿಗಳಾಗಿ ಹೇಳಿದ್ದೀರಿ, ಅದನ್ನು ನಿಮಗೆ ನೆನಪಿಸುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳೇ, ನಿಮ್ಮ ಪೂಜ್ಯ ತಂದೆಯವರು ನಮ್ಮ ಸರ್ಕಾರದ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಮೇಲೆ ಆಪಾದನೆಯನ್ನು ಮಾಡಿದಾಗ ಆ ಪತ್ರಿಕಾ ಹೇಳಿಕೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದು ಸತ್ಯ. ಆದರೆ ಯಾರು ಮಂತ್ರಿಗಳು ಹೋಗಿದ್ದರು ಜರ್ನಲಿಸ್ಟ್ಸ್ ಹೋಗಿದ್ದರು, ನೈಸ್ ಕಂಪನಿಯವರು ಹೋಗಿದ್ದರು ಎಂದು ನಾನು ಹೇಳಲಿಲ್ಲ. You tried to defend me ಮೊನ್ನೆ ನಮ್ಮ ಯಜಮಾನರು.....

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನೀವು ಹರಿಶ್ಚಂದ್ರರು ಸ್ವಾಮಿ. ನೀವು ಹುಟ್ಟಿದಾಗಲೇ ನೀವೆಲ್ಲಾ ಶ್ರೀಮಂತರಾಗಿ ಬಂದಿರುವವರು. ನಮಗೆ ಗೊತ್ತಿದೆ. ನೀವು ಬಹಳ ಹರಿಶ್ಚಂದ್ರರು ಎಂಬುದು ಗೊತ್ತಿದೆ ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ: ನೀವೆಷ್ಟು ಹರಿಶ್ಚಂದ್ರರು ಎಂಬುದೂ ಗೊತ್ತಿದೆ ಸ್ವಾಮಿ. ಸೇಡಿನ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. Your are not going to be permanent there, nor I am going to be permanent here.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನನಗೆ ಹೇಳುವುದಕ್ಕೆ ಅವಕಾಶವನ್ನು ಕೊಡಿ ಮಾನ್ಯ ಅಧ್ಯಕ್ಷರೇ. ನನಗೆ ರಕ್ಷಣೆಯನ್ನು ಕೊಡಿ.

ಅಧ್ಯಕ್ಷರು: ಆಯಿತು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇವತ್ತು ಯಾವುದಾದರೂ ಬೇರೆ ರೀತಿಯ ನಿಯಮಾವಳಿಗಳಲ್ಲಿ ಒಂದು ವಾರ ಅಲ್ಲ, ಈ ಸದನದ ಸಂಪೂರ್ಣ ಅವಧಿಯನ್ನು, ಈ ಒಂದು ಬಜೆಟ್‌ನ ಅಧಿವೇಶನವನ್ನೇನು ಕರೆದಿದ್ದೇವೆ, ನಿಮಗೆ ಎಷ್ಟು ದಿವಸ ಬೇಕಾದರೂ ತೆಗೆದುಕೊಳ್ಳಿ. ಇವತ್ತು ಉತ್ತರ ಕೊಡಲಿಕ್ಕೆ ಸರ್ಕಾರ ಸಮರ್ಥರಾಗಿದ್ದೇವೆ. ನಾವು ಯಾವುದೇ ತಪ್ಪುಗಳನ್ನು ಮಾಡಿಲ್ಲ. ಇವತ್ತು ಚರ್ಚೆಗಳಾಗಬೇಕಾಗಿದೆ, ಇವತ್ತು ಕೂಲಂಕುಷವಾಗಿ ಚರ್ಚೆಯಾಗಲಿ. ಈ ದೇಶದಲ್ಲಿ ಘಟನೆಗಳು ನಡೆದಿದ್ದಾವೆ, ಆ ರೀತಿ ನಡೆದಂಥ ಹಲವಾರು ಘಟನೆಗಳಿಗೆ ಇವತ್ತು ಅನೇಕ ಆಯೋಗಗಳನ್ನು ಮಾಡಿ, ಅನೇಕ ರೀತಿ ಈ ದೇಶದಲ್ಲಿ ಭ್ರಷ್ಟಾಚಾರದ ಬಗ್ಗೆ ಇವತ್ತು ಚರ್ಚೆಯನ್ನು ಮಾಡುತ್ತಿದ್ದಾರೆ, ಇವತ್ತು ಭ್ರಷ್ಟಾಚಾರದ ವಿಷಯದಲ್ಲಿ ಯಾವುದಾದರೂ ಒಬ್ಬ ರಾಜಕಾರಣಿಗೆ ಈ ದೇಶದಲ್ಲಿ ಸ್ವಾತಂತ್ರ್ಯ 58 ವರ್ಷ ಬಂದ ನಂತರ ಈ ದೇಶದಲ್ಲಿ ಯಾರಿಗಾದರೂ ಒಬ್ಬರಿಗೆ ಶಿಕ್ಷೆಯಾಗಿದ್ದರೆ ತಲೆ ಬಾಗಿಬಿಡೋಣ. ಆ ದೃಷ್ಟಿಯಿಂದ ನಾನು ಅವತ್ತೂ ಹೇಳಿದ್ದು. ನಾನು ಆಯೋಗಗಳನ್ನು ಮಾಡತಕ್ಕಂಥದ್ದರಿಂದ ಇವತ್ತು ನಾನು ಅದರಲ್ಲಿ ಸಾಧನೆಯನ್ನು ಮಾಡುತ್ತೇನೆ ಎನ್ನುವ ನಂಬಿಕೆ ಇಲ್ಲ. ಇವತ್ತು ನಮ್ಮ ಕೆಲಸವೇನಿದೆ, ಅದರ ಬಗ್ಗೆ ನಾನು ಗಮನವನ್ನು ಹರಿಸುತ್ತೇನೆ ಎಂದು ನಾನು ಹೇಳಿದ್ದೇನೆ, ನಾನು ಮಾಡಿರತಕ್ಕ ಹೇಳಿಕೆಯಿಂದ ಆಗಿರತಕ್ಕ ತಪ್ಪುಗಳೇನಾದರೂ ಆಗಿದ್ದರೆ ಅದನ್ನು ಚರ್ಚೆ ಮಾಡುವುದಕ್ಕೆ ಬೇರೆ ನಿಯಮಾವಳಿಗಳಲ್ಲಿ ಅವಕಾಶಗಳು ಇದ್ದಾವೆ, ಒಂದು ವಾರ ಇಲ್ಲವೆಂದರೆ 10 ದಿವಸ 20 ದಿವಸ ನಡೆಸಿ. ಸರ್ಕಾರ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಮುಂದೆ ಚರ್ಚೆಯನ್ನು ಪ್ರಾರಂಭ ಮಾಡಲಿಕ್ಕೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶವನ್ನು ಕೊಡಬಹುದು. ಏಕೆಂದರೆ ನಾನೇನೂ ಸುಳ್ಳು ಅಫಿಡವಿಟ್‌ನ್ನು ಕೊಟ್ಟಿದ್ದೇನೆಂದು ಹೇಳಿ ಏನು ಎಲ್ಲಾ ದಂಡೇ ಹೋಗಿತ್ತು, ತಕ್ಷಣ ರಾಜೀನಾಮೆಯನ್ನು ಪಡೆಯಬೇಕು, ಶಾಸಕ ಸ್ಥಾನದಿಂದ ವಜಾ ಮಾಡಬೇಕು, ಮಹಾನ್ ಕಾನೂನು ತಜ್ಞರುಗಳು, ಮಹಾನ್ ಅನುಭವಸ್ಥರುಗಳೇನು ಹೋಗಿದ್ದರು, ಅದಕ್ಕೆಲ್ಲಾ ಉತ್ತರವನ್ನು ಕೊಡುವುದಕ್ಕೆ ಸಿದ್ದನಿದ್ದೇನೆ. ಇದನ್ನು ಬೇರೆ ನಿಯಮಾವಳಿಗಳಲ್ಲಿ ಇದನ್ನು ತೆಗೆದುಕೊಳ್ಳಬಹುದೆಂದು ಮಾನ್ಯ ಅಧ್ಯಕ್ಷರಲ್ಲಿ ನಾನು ಮನವಿಯನ್ನು ಮಾಡುತ್ತೇನೆ.